ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಜನವರಿ 23, 2023

ಸಂಪುಟ : 49 ಸಂಚಿಕೆ : 251 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

ಸುಪ್ರೀಂ ಕೋರ್ಟ್‌ನಿಂದ ಸಂವಿಧಾನ 'ಹೈಜಾಕ್'

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿಡಿಯೋ ಹಂಚಿಕೊಂಡ ರಿಜಿಜು

ನವದೆಹಲಿ, ಜ. 22 – ನ್ಯಾಯಮೂರ್ತಿಗಳನ್ನು ತಾನೇ ನೇಮಕ ಮಾಡುವ ಮೂಲಕ ಸುಪ್ರೀಂ ಕೋರ್ಟ್ ಸಂವಿಧಾನವನ್ನು 'ಹೈಜಾಕ್' ಮಾಡಿದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೀಡಿದ ಹೇಳಿಕೆಯನ್ನು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹಂಚಿಕೊಂಡಿದ್ದಾರೆ.

ಉನ್ನತ ನ್ಯಾಯಾಂಗದ ನೇಮಕ ಪ್ರಕ್ರಿಯೆಗೆ ಸಂಬಂಧಿಸಿ ದಂತೆ ನ್ಯಾಯಾಂಗ ಹಾಗೂ ಸರ್ಕಾರದ ನಡುವೆ ಕಳೆದ ಕೆಲ ದಿನಗಳಿಂದ ಚಕಮಕಿ ನಡೆದಿದೆ. ನಿವೃತ್ತ ನ್ಯಾಯಮೂರ್ತಿ ಆರ್.ಎಸ್. ಸೋಧಿ ಅವರು ಸಂದರ್ಶನ ನೀಡಿದ ವಿಡಿಯೋ ಹಂಚಿಕೊಂಡಿರುವ ರಿಜಿಜು, ಇದು ನ್ಯಾಯಮೂರ್ತಿಗಳ ನಿಲುವು. ಬಹುತೇಕ ಜನರು ಇದೇ ರೀತಿಯ ಪ್ರಜ್ಞಾವಂತ ನಿಲುವು ಹೊಂದಿದ್ದಾರೆ ಎಂದಿದ್ದಾರೆ. ಕಾನೂನುಗಳನ್ನು ರೂಪಿಸುವ ಅಧಿಕಾರ (4ನೇ ಪುಟಕ್ಕೆ)

ದಾವಣಗೆರೆಯ ಗಾನ ಸೌರಭ ಸಂಗೀತ ವಿದ್ಯಾಲಯದಿಂದ ದಶಮಾನೋತ್ಸವ ಸಂಭ್ರಮದ ಅಂಗವಾಗಿ 'ಗಾನ ನಾದ ಸೌರಭ' ಕಾರ್ಯಕ್ರಮ ಭಾನುವಾರ ಮೋತಿ ವೀರಪ್ಪ ಪ್ರೌಢಶಾಲಾ ಆವರಣದಲ್ಲಿ ನಡೆಯಿತು. ವಿದುಷಿ ವಿಜಯಲಕ್ಷ್ಮಿ ರಘು ಸಾರಥ್ಯದಲ್ಲಿ ಶುಭದಾ ಹಾಗೂ ವಿದ್ಯಾರ್ಥಿಗಳಿಂದ ವೀಣಾ ವಾದನ ನಡೆಸಿಕೊಟ್ಟರು.

ಭದ್ರಾವತಿ ಕಾರ್ಖಾನೆ ಮುಚ್ಚದಂತೆ ಪ್ರಧಾನಿಗೆ ದೇವೇಗೌಡರ ಒತ್ತಾಯ

ಬೆಂಗಳೂರು, ಜ. 22 – ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ವಿ.ಎಸ್.ಐ.ಎಲ್.) ಮುಚ್ಚುವ ಪ್ರಸ್ತಾಪ ಕೈ ಬಿಡುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಪತ್ರ ಬರೆದಿದ್ದಾರೆ.

ವಿ.ಐ.ಎಸ್.ಎಲ್. ಪುನಶ್ಚೇತನಕ್ಕೆ ಕ್ರಮ ತೆಗೆದುಕೊಳ್ಳಬೇಕು. ಕರ್ನಾಟಕದಲ್ಲಿ ಸರ್ಕಾರಿ ಸ್ವಾಮ್ಯದ ಕಬ್ಬಿಣ ಹಾಗೂ ಉಕ್ಕಿನ ಘಟಕ ಇರುವುದು ಇದೊಂದೇ. ಇದನ್ನು ಮುಚ್ಚುವುದರಿಂದ 20 ಸಾವಿರ ಕುಟುಂಬಗಳ ಜೀವನದ ಮೇಲೆ ಪರಿಣಾಮವಾಗುತ್ತದೆ ಎಂದು ಗೌಡರು ಹೇಳಿದ್ದಾರೆ. ಕೆಲವು ಕೋಟಿಗಳ ಹೂಡಿಕೆಯಿಂದ ಕಂಪನಿಯನ್ನು ಲಾಭಕ್ಕೆ ತರಬಹುದು. ಇದು ಆತ್ಮನಿರ್ಭರ ಭಾರತಕ್ಕೆ ಕೊಡುಗೆ ನೀಡಬಲ್ಲದು. ಈ ಘಟಕವು ರಕ್ಷಣೆ, ಅಣು, ಆಟೋಮೊಬೈಲ್, ರೈಲ್ವೆ ಮತ್ತಿತರ ವಲಯಗಳಿಗೆ ಕೊಡುಗೆ ನೀಡಬಲ್ಲದು ಎಂದು ಗೌಡರು ಹೇಳಿದ್ದಾರೆ. (4ನೇ ಪುಟಕ್ಕೆ)

ಅಮೆರಿಕದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಹತ್ತು ಸಾವು

ಮಾಂಟೆರಿ ಪಾರ್ಕ್, ಜ. 22 – ಲಾಸ್ ಎಂಜಲೀಸ್‌ನ ಪೂರ್ವ ನಗರವಾದ ಮಾಂಟೆರಿ ಪಾರ್ಕ್ ನಗರದಲ್ಲಿ ಶನಿವಾರ ತಡರಾತ್ರಿ ನಡೆದ ಸಾಮೂಹಿಕ ಗುಂಡಿನ ದಾಳಿಯಲ್ಲಿ ಹತ್ತು ಜನ ಸಾವನ್ನಪ್ಪಿದ್ದಾರೆ. ಚಂದ್ರಮಾನ ಹೊಸ ವರ್ಷದ ಆಚರಣೆಗೆ ಸಾವಿರಾರು ಜನರು ಸೇರಿದ ಸಂದರ್ಭದಲ್ಲಿ ದಾಳಿ ನಡೆಸಲಾಗಿದೆ.

ಮಾಂಟೆರಿ ಪಾರ್ಕ್‌ನ ಗಾರ್ವೆ ಎವೆಯಲ್ಲಿ ಬಂದೂ ಕುಧಾರಿಯೋರ್ವ ಈ ದಾಳಿ ನಡೆಸಿದ್ದಾನೆ. ಈ ನಗರದಲ್ಲಿ 60 ಸಾವಿರ ಜನರಿದ್ದು, ಅತಿ ಹೆಚ್ಚಿನ ಏಷಿಯ ಮೂಲ ದವರಿದ್ದಾರೆ. ದಾಳಿಯಲ್ಲಿ ಹತ್ತು ಜನ ಗಾಯಗೊಂಡಿದ್ದಾರೆ.

60 'ಅಲ್ಪಸಂಖ್ಯಾತ' ಕ್ಷೇತ್ರಗಳಲ್ಲಿ ಬಿಜೆಪಿ ಅಭಿಯಾನ

ಪ್ರಧಾನಿ ಸಂದೇಶವನ್ನು ಅಲ್ಪಸಂಖ್ಯಾತರಿಗೆ ತಲುಪಿಸಲು ಯೋಜನೆ

ನವದೆಹಲಿ, ಜ. 22 – ಸಮಾಜದ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸಂದೇಶ ತಲುಪಿಸಲು ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾ 60 ಲೋಕಸಭಾ ಕ್ಷೇತ್ರಗಳನ್ನು ಗುರುತಿಸಿದೆ.

ಅಲ್ಪಸಂಖ್ಯಾತರು ಶೇ.30ಕ್ಕಿಂತ ಹೆಚ್ಚಾಗಿರುವ ಕ್ಷೇತ್ರಗಳನ್ನು ಹತ್ತು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶವೊಂದರಲ್ಲಿ ಗುರುತಿಸಲಾಗಿದೆ. ಈ ಕ್ಷೇತ್ರಗಳಲ್ಲಿ ನಾಲ್ಕು ತಿಂಗಳ ಕಾಲ ಜನಸಂಪರ್ಕ ಅಭಿಯಾನ ಆಯೋಜಿಸಲು ನಿರ್ಧರಿಸಲಾಗಿದೆ. ಇದರಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಯನಾಡ್ ಲೋಕಸಭಾ ಕ್ಷೇತ್ರವೂ ಸೇರಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸಂದೇಶವನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ಕೆ ಪ್ರತಿ ಕ್ಷೇತ್ರದಲ್ಲಿ ಐದು ಸಾವಿರ ಕಾರ್ಯಕರ್ತರನ್ನು ನಿಯೋಜಿಸಲಾಗುವುದು. ಇವರು ರಾಯಭಾರಿಗಳಾಗಿ ಅಲ್ಪಸಂಖ್ಯಾತ ಸಮುದಾಯದವರನ್ನು ತಲುಪಲಿದ್ದಾರೆ. ಮಾರ್ಚ್ - ಏಪ್ರಿಲ್ ತಿಂಗಳಲ್ಲಿ ಸ್ಕೂಟರ್ ಯಾತ್ರೆ ಹಾಗೂ ಸ್ನೇಹ ಯಾತ್ರೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಮೇ ತಿಂಗಳಲ್ಲಿ ಈ ಯಾತ್ರೆಗಳು ದೆಹಲಿಯಲ್ಲಿ ಪೂರ್ಣಗೊಳ್ಳಲಿವೆ. ಆ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಬೃಹತ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಪ್ರಧಾನ ಮಂತ್ರಿ ಅವರ ಸಂದೇಶವನ್ನು ಜನತೆಗೆ ತಲುಪಿಸಲು ಇತ್ತೀಚೆಗೆ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧರಿಸಿದ್ದೇವೆ. ಸಮಾಜದ ಹಿಂದುಳಿದ ಎಲ್ಲ ವರ್ಗಗಳನ್ನು ತಲುಪುವಂತೆ ಪ್ರಧಾನಿ ತಿಳಿಸಿದ್ದಾರೆ ಎಂದು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕಿ ತಿಳಿಸಿದ್ದಾರೆ.

ಮತಕ್ಕಾಗಿ ಈ ಕಾರ್ಯ ಮಾಡಬಾರದು ಎಂದು ಪ್ರಧಾನಿ ಹೇಳಿದ್ದಾರೆ. ಆದರೆ, ರಾಜಕೀಯ ಪಕ್ಷವಾಗಿ ನಾವು ಚುನಾವಣೆಗಳನ್ನು ಗೆಲ್ಲಬೇಕಿದೆ. ಹೀಗಾಗಿ ಸರ್ಕಾರದ ಯೋಜನೆಗಳನ್ನು ತಲುಪಿಸುವ ಹಾಗೂ ಚುನಾವಣೆ ಗೆಲ್ಲುವ ಎರಡೂ ಉದ್ದೇಶಗಳಿಂದ ಕಾರ್ಯ ನಿರ್ವಹಿಸುತ್ತೇವೆ ಎಂದು ಸಿದ್ದಿಕಿ ಹೇಳಿದ್ದಾರೆ.

ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳಗಳ ತಲಾ 13, ಜಮ್ಮು ಮತ್ತು ಕಾಶ್ಮೀರದ ಐದು, ಬಿಹಾರದ ನಾಲ್ಕು, ಕೇರಳ ಹಾಗೂ ಅಸ್ಸಾಂಗಳ ಆರು, ಮಧ್ಯ ಪ್ರದೇಶದ ಮೂರು, ತೆಲಂಗಾಣ ಹಾಗೂ (2ನೇ ಪುಟಕ್ಕೆ)

ಸಾರಿಗೆ ನೌಕರರಿಂದ ನಾಳೆ ಧರಣಿ

ಬೆಂಗಳೂರು, ಜ. 22 – ವೇತನ ಹೆಚ್ಚಳ ಸೇರಿದಂತೆ ಹಲವಾರು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮುಷ್ಕರ ನಡೆಸಲು ಸಾರಿಗೆ ನೌಕರರು ನಿರ್ಧರಿಸಿದ್ದಾರೆ. ನಾಡಿದ್ದು ದಿನಾಂಕ 24ರ ಮಂಗಳವಾರ ಬೃಹತ್ ಧರಣಿ ಸತ್ಯಾಗ್ರಹ ಆಯೋಜಿಸಲಾಗಿದ್ದು, ಬಸ್ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆಯೂ ಇದೆ.

ಸಾರಿಗೆಯ ನಾಲ್ಕು ನಿಗಮದ ನೌಕರರು ವಿಭಾಗೀಯ ಕಚೇರಿಗಳ ಮುಂದೆ ಧರಣಿ ನಡೆಸಲಿದ್ದಾರೆ. ಇದೇ ವೇಳೆ ಬಿ.ಎಂ.ಟಿ.ಸಿ. ನೌಕರರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಲಿದ್ದಾರೆ. ಈ ಹಿಂದೆ (2ನೇ ಪುಟಕ್ಕೆ)

ಗಣರಾಜ್ಯೋತ್ಸವ ಪರೇಡ್‌ನಲ್ಲಿ ನಾರಿಶಕ್ತಿ ಸಂದೇಶ

ನವದೆಹಲಿ, ಜ. 22 – ಬರುವ ಗಣರಾಜ್ಯೋತ್ಸವದ ದೆಹಲಿ ಪರೇಡ್‌ನಲ್ಲಿ 23 ಸ್ತಬ್ಧಚಿತ್ರಗಳ ಪ್ರದರ್ಶನ ನಡೆಯಲಿದೆ. ಇವುಗಳಲ್ಲಿ ಸಾಕಷ್ಟು ಸ್ತಬ್ಧಚಿತ್ರಗಳು ನಾರಿ ಶಕ್ತಿಯ ಸಂದೇಶವನ್ನು ಹೊಂದಿವೆ.

ಕರ್ನಾಟಕ ಸೇರಿದಂತೆ 17 ರಾಜ್ಯಗಳ ಸ್ತಬ್ಧಚಿತ್ರಗಳು ಪ್ರದರ್ಶನಗೊಳ್ಳಲಿವೆ. ಹಲವಾರು ಸಚಿವಾಲಯಗಳ ಆರು ಸ್ತಬ್ಧಚಿತ್ರಗಳು ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗಿಯಾಗಲಿವೆ.

ಈ ಹಿಂದೆ ರಾಜಪಥ ಎಂದು ಕರೆಯ ಲಾಗುತ್ತಿದ್ದ ಪಥಸಂಚಲನದ ರಸ್ತೆಯನ್ನು ಈಗ ಕರ್ತವ್ಯಪಥ ಎಂದು ಬದಲಿಸಲಾಗಿದೆ.

ಮಾದಕ ನಿಯಂತ್ರಣ ದಳ ಮೊದಲ ಬಾರಿಗೆ ತನ್ನ ಸ್ತಬ್ಧ ಚಿತ್ರವನ್ನು ಪ್ರದರ್ಶನ ಮಾಡಲಿದೆ. ಗೃಹ ಸಚಿವಾಲಯ, ಕೃಷಿ, ಬುಡಕಟ್ಟು ಸಚಿವಾಲಯ, ಲೋಕೋಪಯೋಗಿ ಇಲಾಖೆಗಳ ಸ್ತಬ್ಧ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ವಾಲ್ಮೀಕಿ ಜಾತ್ರೆ ಸ್ವಾಭಿಮಾನದ ಸಂಕೇತ

ಫೆ. 8ರಿಂದ ಜಾತ್ರೆ : ಹಂದರ ಕಂಬ ಪೂಜೆ ಸಲ್ಲಿಸಿದ ವಾಲ್ಮೀಕಿ ಶ್ರೀಗಳ ಅಭಿಮತ

ರಾಷ್ಟ್ರಪತಿಗಳಿಂದ ನೂತನ ರಥ ಉದ್ಘಾಟನೆ ಸಾಧ್ಯತೆ

ಮಲೇಬೆನ್ನೂರು, ಜ.22- ರಾಜನ ಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಹಮ್ಮಿಕೊಂಡಿರುವ 5ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರೆಯ ವೇದಿಕೆ ಹಾಗೂ ಮಹಾಮಂಟಪ ನಿರ್ಮಾಣಕ್ಕೆ ಭಾನುವಾರ ಹಂದರಕಂಬ ಪೂಜೆ ಮಾಡುವ ಮೂಲಕ ಚಾಲನೆ ನೀಡಲಾಯಿತು.

ಪೂಜೆಯ ದಿವ್ಯ ನೇತೃತ್ವ ವಹಿಸಿದ್ದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಈ ವೇಳೆ ಮಾತನಾಡಿ, ವಾಲ್ಮೀಕಿ ಜಾತ್ರೆ ಸ್ವಾಭಿಮಾನದ ಸಂಕೇತವಾಗಿದ್ದು, ಜಾತ್ರೆಯ ಮೂಲಕ ಅಖಂಡ ಕರ್ನಾಟಕ ಬೇಡ, ವಾಲ್ಮೀಕಿ ನಾಯಕ ಸಮುದಾಯವನ್ನು ಒಂದೇ ವೇದಿಕೆಗೆ ಕರೆತಂದು ವಿಷಯಾಧಾರಿತ ಚರ್ಚೆ ಮಾಡಲಾಗುವುದು. ಸಮುದಾಯದ ಸಾಂಸ್ಕೃತಿಕ ಇತಿಹಾಸವನ್ನು ಇಂದಿನ ಯುವ ಜನಾಂಗಕ್ಕೆ ಪರಿಚಯಿಸುವುದು ಮತ್ತು ಸಂವಿಧಾನದಲ್ಲಿ ಇರುವ ಹಕ್ಕುಗಳ ಬಗ್ಗೆ ತಿಳಿಸು ವುದು ಸೇರಿದಂತೆ ಹತ್ತು ಹಲವು ವಿಷಯಗಳನ್ನು ಸಮಾಜದ ಗಮನಕ್ಕೆ ತರಲಾಗುವುದು.

ಮಹಿಳಾ ಗೋಷ್ಠಿ, ಕೃಷಿಕರ ಗೋಷ್ಠಿ, ನೌಕರರ ಗೋಷ್ಠಿ, ಯುವ ಗೋಷ್ಠಿಗಳನ್ನು ಜಾತ್ರೆಯಲ್ಲಿ ಸಂಘಟಿಸಲಾಗುವುದೆಂದು ತಿಳಿಸಿದ ಸ್ವಾಮೀಜಿ ಅವರು (4ನೇ ಪುಟಕ್ಕೆ)

ರಾಜ ಕುಟುಂಬ ಅಧಿಕಾರಿ ಸೋಗಿನಲ್ಲಿ ಹೋಟೆಲ್‌ಗೆ 23 ಲಕ್ಷ ರೂ. ವಂಚನೆ

ನವದೆಹಲಿ, ಜ. 17 – ಯು.ಎ.ಇ. ರಾಜಕುಟುಂಬದ ಅಧಿಕಾರಿಯ ಸೋಗಿನಲ್ಲಿ ನಾಲ್ಕು ತಿಂಗಳು ಇಲ್ಲಿನ ಪಂಚತಾರಾ ಹೋಟೆಲ್‌ನಲ್ಲಿದ್ದು 23 ಲಕ್ಷ ರೂ. ವಂಚಿಸಿದ ವ್ಯಕ್ತಿಯೋರ್ವನನ್ನು ಬಂಧಿಸಲಾಗಿದೆ.

ಮೊಹಮ್ಮದ್ ಶರೀಫ್ ಎಂಬಾತ ನವದೆಹಲಿಯ ಲೀಲಾ ಪ್ಯಾಲೇಸ್ ಹೋಟೆಲ್‌ನಲ್ಲಿ ಕಳೆದ ವರ್ಷ ಆಗಸ್ಟ್ 1ರಂದು ನಾಲ್ಕು ತಿಂಗಳಿಗಾಗಿ ಕೋಣೆ ಬುಕ್ ಮಾಡಿದ್ದ. ನವೆಂಬರ್ 20ರಂದು ಹಣ ಪಾವತಿಸದೇ ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

23.46 ಲಕ್ಷ ರೂ. ವಂಚನೆಯ ಜೊತೆಗೆ ಹಲವಾರು ಬೆಲೆ ಬಾಳುವ ವಸ್ತುಗಳನ್ನೂ ಕದ್ದಿದ್ದ. ಶರೀಫ್‌ನನ್ನು ಕರ್ನಾಟಕದ ದಕ್ಷಿಣ ಕನ್ನಡದಲ್ಲಿರುವ ಆತನ ಮನೆಯಿಂದ ಜನವರಿ (2ನೇ ಪುಟಕ್ಕೆ)

ಗುರುವಾಯೂರು ದೇವಾಲಯದಲ್ಲಿ 260 ಕೆಜಿ ಬಂಗಾರ

ತ್ರಿಸ್ಸೂರು, ಜ. 22 – ಕೇರಳದ ಪ್ರಸಿದ್ಧ ಗುರುವಾಯೂರು ಶ್ರೀ ಕೃಷ್ಣ ದೇವಾಲಯ 260 ಕೆ.ಜಿ. ಬಂಗಾರ ಹೊಂದಿರುವುದಾಗಿ ಮಾಹಿತಿ ಹಕ್ಕು ಅರ್ಜಿಯೊಂದಕ್ಕೆ ತಿಳಿಸಲಾಗಿದೆ.

263.63 ಕೆ.ಜಿ. ಬಂಗಾರ ದೇವಾ ಲಯದಲ್ಲಿ ಇದೆ. ಇದರಲ್ಲಿ ಹರಳು, ನಾಣ್ಯ ಹಾಗೂ 20 ಸಾವಿರ ಬಂಗಾರದ ಪದಕಗಳು ಸೇರಿವೆ ಎಂದು ಮಾಹಿತಿ ನೀಡಲಾಗಿದೆ. ಭದ್ರತಾ ಕಾರಣದಿಂದಾಗಿ (4ನೇ ಪುಟಕ್ಕೆ)

ಸಿರಿವಂತ ಯಾನ್ ಆಸ್ತಿ ಮೌಲ್ಯ ಶೇ.93 ಕುಸಿತ

ರಿಯಲ್ ಎಸ್ಟೇಟ್ ಕುಸಿತದ ಪರಿಣಾಮ

ನವದೆಹಲಿ, ಜ. 22 – ಚೀನಾದ ಅತ್ಯಂತ ಶ್ರೀಮಂತ ಹಾಗೂ ಪ್ರಭಾವಿ ಉದ್ಯಮಿಯಾಗಿದ್ದ ಹುಯ್ ಕಾ ಯಾನ್ ಅವರ ಆಸ್ತಿ ಮೌಲ್ಯ ಶೇ.93ರಷ್ಟು ಕುಸಿತ ಕಂಡಿದೆ.

ಚೀನಾ ಎವರ್‌ಗ್ರಾಂಡೆ ಸಮೂಹದ ಅಧ್ಯಕ್ಷರಾಗಿದ್ದ ಯಾನ್ ಆಸ್ತಿ ಮೌಲ್ಯ ಒಂದು ಕಾಲದಲ್ಲಿ 42 ಶತಕೋಟಿ ಡಾಲರ್ ಆಗಿತ್ತು. ಅವರು ಏಷಿಯಾದ ಎರಡನೇ ಅತ್ಯಂತ ಶ್ರೀಮಂತ ವ್ಯಕ್ತಿಯೂ ಆಗಿದ್ದರು. ಆದರೆ, ಈಗ ಅವರ ಆಸ್ತಿ ಮೌಲ್ಯ 3 ಶತಕೋಟಿ ಡಾಲರ್‌ಗಳಿಗೆ ಕುಸಿದಿದೆ ಎಂದು ಬ್ಲೂಮ್‌ಬರ್ಗ್ ಬಿಲಿಯನೇರ್ ಇಂಡೆಕ್ಸ್ ಸೂಚ್ಯಂಕ ತಿಳಿಸಿದೆ.

ಎವರ್‌ಗ್ರಾಂಡೆ ಚೀನಾದ ಅತಿ ದೊಡ್ಡ ಪ್ರಮಾಣದ ಸಾಲ ಹೊಂದಿರುವ ನಿರ್ಮಾಣ ಸಂಸ್ಥೆಯಾಗಿದೆ. ಇದರ ಸಾಲ 300 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. 2021ರ ನಂತರ (4ನೇ ಪುಟಕ್ಕೆ)

ಹರಿಹರ: ಬಿಜೆಪಿಯಿಂದ ವಿಜಯ ಸಂಕಲ್ಪ

ಪಕ್ಷ ಬಲಪಡಿಸಲು ಕಾರ್ಯಕರ್ತರಿಗೆ ಸಂಸದ ಸಿದ್ದೇಶ್ವರ ಕರೆ

ಹರಿಹರ, ಜ. 22 - ವಿಜಯ ಸಂಕಲ್ಪ ಅಭಿಯಾನದ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರ ದೇಶದ ಹಾಗೂ ರಾಜ್ಯ ಸರ್ವತೋ ಮುಖ ಅಭಿವೃದ್ಧಿಗಾಗಿ ಇಲ್ಲಿಯ ವರೆಗೂ ಸಾಧಿಸಿರುವ ಸಾಧನೆಗಳ ಸಮಗ್ರ ವಿವರವನ್ನು ಮನೆ-ಮನೆಗೂ ತಲುಪಿಸುವುದ ರೊಂದಿಗೆ ಬಿಜೆಪಿ ಪಕ್ಷವನ್ನು ಬಲ ಪಡಿಸಲು ಪ್ರತಿ ಯೊಬ್ಬ ಕಾರ್ಯಕರ್ತರು ಶ್ರಮಿಸಬೇಕೆಂದು ಸಂಸದ ಜಿ.ಎಂ. ಸಿದ್ದೇಶ್ವರ ಕಾರ್ಯಕರ್ತರಿಗೆ ಕರೆ ನೀಡಿದರು.

ನಗರದ ಮಹಜೇನಹಳ್ಳಿ ಊರಮ್ಮ ದೇವಿ ದೇವ ಸ್ಥಾನದ ಎದುರು ಏರ್ಪಡಿಸಿದ್ದ ವಿಜಯ ಸಂಕಲ್ಪ ಅಭಿ ಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ನಗರದ ಜೆಸಿ ಬಡಾವಣೆ, ಹಳ್ಳದಕೇರಿ, ಕುಂಬಾರ ಓಣಿಗಳಲ್ಲಿ ಅವರು ಮನೆಮನೆಗೆ ತೆರಳಿ ಕರಪತ್ರ ಹಂಚಿ ಮಾತನಾಡಿದರು.

ಮಾಜಿ ಶಾಸಕ ಬಿ.ಪಿ ಹರೀಶ್ ಮಾತನಾಡಿ, ಬಾರತೀಯ ಜನತಾ ಪಕ್ಷ ದೇಶದ ಹಾಗೂ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಾಗಿನಿಂದ ಅಭಿವೃದ್ಧಿಯ ಮಹಾಪೂರವೆ ಹರಿದಿದೆ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ (2ನೇ ಪುಟಕ್ಕೆ)

॥ ಶ್ರೀ ಕಾರಡಗಿ ವೀರಭದ್ರೇಶ್ವರ ಪ್ರಸನ್ನ ॥

ಆರನೇ ವಾರ್ಷಿಕ ಭಾವಪೂರ್ಣ ಸ್ಮರಣಾಂಜಲಿ

ಕೆ.ಎಸ್. ಚನ್ನವೀರಯ್ಯ
ಇವರ ಧರ್ಮಪತ್ನಿ
ಶ್ರೀಮತಿ ಕು॥ಸೌ॥
ಕೆ.ಸಿ.ಸೌಭಾಗ್ಯಮ್ಮ
ಲಿಂಗೋದ್ಭವ : 17.02.1953
ಲಿಂಗೈಕ್ಯ : 23.01.2017

ಸತಿ ಪತಿಗಳೊಂದಾದ ಭಕ್ತಿ ಹಿತ ಒಪ್ಪವದು ಪರಶಿವನಿಗೆ,
ಎಂಬ ವಚನಾಮೃತದಂತೆ ಬಾಳಿ ಜೀವನದಲ್ಲಿ ಆದರ್ಶ ಸತಿಯಾಗಿ,
ಮಮತೆಯ ಮಾತೆಯಾಗಿ, ಪ್ರೀತಿಯ ಬಂಧುವಾಗಿ,
ಅಥಿತಿಗಳಿಗೆ ಅನ್ನಪೂರ್ಣೇಶ್ವರಿಯಾಗಿ, ಅಕ್ಕ-ಪಕ್ಕದವರಿಗೆ
ವಾತ್ಸಲ್ಯದ ಗಣಿಯಾಗಿ, ಸಕಲರ ಪ್ರೀತಿ-ವಿಶ್ವಾಸ, ಗೌರವಕ್ಕೆ ಪಾತ್ರರಾಗಿ
ಈಶನಲ್ಲಿ ಭಗವದ್ಭಕ್ತಿಯೊಂದಿಗೆ ಸರಳ ಸಾತ್ವಿಕ ಮಾದರಿಯ ಜೀವನ ನಡೆಸಿದ
ತಮ್ಮ ಆಕಸ್ಮಿಕ ಅಗಲುವಿಕೆಯಿಂದ ನಮ್ಮಗಳಿಗೆಲ್ಲಾ ಅತೀವ ತುಂಬಲಾರದ
ದುಃಖವಾಗಿದೆ. ನಿಮ್ಮ ಪವಿತ್ರ ಆತ್ಮಕ್ಕೆ ಪರಮದಯಾಳು ದೀನಬಂಧು
ಶ್ರೀ ಸಾಯಿನಾಥನು ದಿವ್ಯ ಸದ್ಗತಿ ನೀಡಲೆಂದು ನಮ್ಮಗಳ ತ್ರಿಕಾಲ ಪ್ರಾರ್ಥನೆ...

ನಿಮ್ಮ ಸ್ಮರಿಸುವ : ಪತಿ: ಕೆ.ಎಸ್. ಚನ್ನವೀರಯ್ಯ
ಕೆ.ಬಿ. ಬಡಾವಣೆ, ದಾವಣಗೆರೆ-2.
ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಮತ್ತು ಕಿತ್ತೂರ ಮಠದ ಬಂಧುಗಳು

ವಿ.ಸೂ. ಶ್ರೀಮತಿ ಅವರ ಸ್ಮರಣಾರ್ಥವಾಗಿ 23.01.2023 ಸೋಮವಾರ ಹಾವೇಲಿ ಜಿಲ್ಲಾ ಬ್ಯಾಡಗಿ ತಾಲ್ಲೂಕು ಕದರಮಂಡಲಗಿ ಶ್ರೀ ಕಾಂತೇಶ್ವರ ಸನ್ನಿಧಿಯಲ್ಲಿ 12.30 ರಿಂದ ಅನ್ನ ಸಂತರ್ಪಣೆಯಿರುತ್ತದೆ.

ಫೋ. : 70227 79716, 98440 02785, 95000 27489

ಹಿರೇಕಲ್ಮಠದ ಲಿಂ. ಶ್ರೀಗಳ ಪಟ್ಟಾಧಿಕಾರದ ಸುವರ್ಣ ಮಹೋತ್ಸವದ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಸಿದ್ಧತೆ

ಹೊನ್ನಾಳಿ, ಜ.22- ಲಿಂ. ಶ್ರೀ ಒಡೆಯರ್ ಚಂದ್ರಶೇಖರ ಶಿವಾ ಚಾರ್ಯ ಸ್ವಾಮೀಜಿಗಳ ಪಟ್ಟಾಧಿ ಕಾರದ ಸುವರ್ಣ ಮಹೋತ್ಸವದ ಸಂಭ್ರಮವನ್ನು ಶ್ರೀಮಠದ ಎಲ್ಲಾ ಭಕ್ತಾದಿಗಳ ಸಹಕಾರದಿಂದ ಐತಿ ಹಾಸಿಕ ಕಾರ್ಯಕ್ರಮವನ್ನಾಗಿ ಸಲು ಸಿದ್ಧತೆಗಳು ಭರದಿಂದ ಸಾಗಿವೆ ಎಂದು ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಹಿರೇಕಲ್ಮಠದಲ್ಲಿ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಶ್ರೀ ಗುರು ಚನ್ನೇಶ್ವರ ಬೆಳ್ಳಿ ರಥೋತ್ಸವ ಮತ್ತು ಸಂಸ್ಕೃತಿ-ಸಂಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಲಿಂ. ಶ್ರೀ ಒಡೆಯರ್ ಚಂದ್ರಶೇಖರ ಶಿವಾ ಚಾರ್ಯ ಸ್ವಾಮೀಜಿಗಳು 11.6.1972 ರಂದು ಪಟ್ಟಾಧಿಕಾರ ಸ್ವೀಕರಿಸಿದ ನಂತರ ಶ್ರೀಮಠದಲ್ಲಿ ಎಲ್.ಕೆ.ಜಿ.ಯಿಂದ ಪಿಯುಸಿ, ಡಿಗ್ರಿ, ಐಟಿಐ, ಬಿಇಡಿ, ಸಂಸ್ಕೃತ ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಿ, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದರು. ವಿದ್ಯಾರ್ಥಿಗಳಿಗೆ ಉಚಿತ ವಸತಿ, ಊಟದ ವ್ಯವಸ್ಥೆ ಕಲ್ಪಿಸಿ ಈ ಭಾಗದ ನಡೆದಾಡುವ ದೇವರೆಂದೇ ಪ್ರಖ್ಯಾತಿ ಗಳಿಸಿದ್ದಾರೆ ಎಂದರು.

ಶ್ರೀಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಅನೇಕ ಮಹತ್ತರ ಬದಲಾವಣೆಗಳನ್ನು ತರುವುದರ ಜೊತೆಗೆ ನ್ಯಾಯಾಲಯ ದಲ್ಲಿ ಇತ್ಯರ್ಥವಾಗದ ಎಷ್ಟೋ ಪ್ರಕರಣಗಳನ್ನು ಶ್ರೀಮಠದಲ್ಲಿ ರಾಜೀ-ಪಂಚಾಯ್ತಿಗಳ ಮೂಲಕ ಬಗೆಹರಿಸಿ ಮಾದರಿ ಎನಿಸಿದ್ದರು ಎಂದು ಬಣ್ಣಿಸಿದರು.

ಲಿಂ. ಶ್ರೀಗಳವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವದ ಪ್ರಯುಕ್ತ ಅವರ ಹೆಸರನ್ನು ಯೋಜನೆಗಳ ಮೂಲಕ ಶಾಶ್ವತವಾಗಿರಿಸುವ ನಿಟ್ಟಿನಲ್ಲಿ 2023ರ ನವೆಂಬರ್ 14 ರಿಂದ ಡಿಸೆಂಬರ್ 11 ರವರೆಗೆ ಕೋಟಿ ದೀಪೋತ್ಸವ, ಕೋಟಿ ಬಿಲ್ವಾರ್ಚನೆ, ಕೋಟಿ ಕ್ಷೀರಾಭಿಷೇಕ, 100 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ, ನರ್ಸಿಂಗ್, ಫಾರ್ಮಸಿ, ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲಾ-ಕಾಲೇಜುಗಳನ್ನು ಪ್ರಾರಂಭ ಮಾಡಲಾಗುವುದು. ಎಲ್ಲಾ ರಾಜ್ಯಗಳಿಂದ 5 ಗೋವುಗಳನ್ನು ತಂದು ವಿದೇಶಿ ತಳಿಗಳ ಪರಿಚಯ ಮಾಡುವುದರ ಜೊತೆಗೆ ಗೋ-ಸಂವರ್ಧನಾ ಕೇಂದ್ರವನ್ನು ತೆರೆಯಲಾಗುವುದು ಎಂದು ಶ್ರೀಗಳು ತಿಳಿಸಿದರು.

ಈ ಎಲ್ಲಾ ಯೋಜನೆಗಳ ನೀಲ-ನಕಾಶೆ ಈಗಾಗಲೇ ಸಿದ್ಧಗೊಂಡಿದ್ದು ಪುರಸಭಾ ಸದಸ್ಯ ಹೊಸಕೇರಿ ಸುರೇಶ್ ನೇತೃತ್ವದ ತಂಡ ಅವಳಿ ತಾಲ್ಲೂಕಿನ ಹಳ್ಳಿಗಳಿಗೆ ತೆರಳಿ ಈ ಬಗ್ಗೆ ಭಕ್ತಾದಿಗಳಿಗೆ ಮಾಹಿತಿ ನೀಡುವುದರ ಜೊತೆಗೆ ಸಮಿತಿಗಳನ್ನು ರಚಿಸುವ ಕೆಲಸವನ್ನು ತುಂಬಾ ಜವಾಬ್ದಾರಿಯಿಂದ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುರಸಭಾ ಸದಸ್ಯ ಹೊಸಕೇರಿ ಸುರೇಶ್ ಮಾತನಾಡಿ, ಪ್ರತೀ ಅಮಾವಾಸ್ಯೆಯಂದು ಹಿರೇಕಲ್ಮಠದಲ್ಲಿ ಸಂಸ್ಕೃತಿ-ಸಂಸ್ಕಾರ ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿ ನಮ್ಮ ಸಂಸ್ಕೃತಿಯನ್ನು ಉಳಿಸಿ-ಬೆಳೆಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು.

ಚಿಕ್ಕಕಬ್ಬಾರ್ ದಯಾನಂದಸ್ವಾಮಿ ಉಪನ್ಯಾಸ ನೀಡಿದರು. ಮಠದ ವ್ಯವಸ್ಥಾಪಕ ಎಂ.ಪಿ.ಎಂ. ಚನ್ನಬಸಯ್ಯ, ಪ್ರಧಾನ ಅರ್ಚಕ ಅನ್ನದಾನಯ್ಯ ಶಾಸ್ತ್ರಿ, ಶಿವಲಿಂಗಾರಾಧ್ಯ ಶಾಸ್ತ್ರಿ, ಕೋರಿ ಗುರುಲಿಂಗಣ್ಣ, ಕುಮಾರಸ್ವಾಮಿ, ರೆಡ್ಡಿ, ಅಭಿನೇತ್ರಿ ಡ್ಯಾನ್ಸ್ ಮತ್ತು ಮ್ಯೂಸಿಕಲ್ ಅಕಾಡೆಮಿ ಮತ್ತು ಚನ್ನೇಶ್ವರ ಗಾನ ಕಲಾ ಬಳಗದ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಪುರಂದರ ದಾಸರ ಕೃತಿಗಳ ಸಾರ ಮಾನವ ಜನ್ಮದ ಕಲ್ಯಾಣವಾಗಿದೆ

ಹರಿಹರ, ಜ. 22 - ದಾರ್ಶನಿಕರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅನುಸರಿಸಿ, ಅಳವಡಿಸಿಕೊಳ್ಳುವ ದೃಷ್ಟಿಯಿಂದ ಮಹಾತ್ಮರ ಜಯಂತಿ ಮತ್ತು ಆರಾಧನೆಗಳನ್ನು ಆಚರಿಸಲಾಗುತ್ತದೆ ಎಂದು ದಾವಣಗೆರೆ ತಾಲ್ಲೂಕು ಕಬ್ಬೂರು ಸರ್ಕಾರಿ ಪ್ರೌಢಶಾಲೆಯ ಸಂಗೀತ ಶಿಕ್ಷಕ ಅಜಯ್ ನಾರಾಯಣ ಹೇಳಿದರು.

ಹರಿಹರದ ಹರಿಹರೇಶ್ವರ ಭವನದಲ್ಲಿ ಲಕ್ಷ್ಮೀಶ ಕಲಾ ಸಂಘವು ತಾ. ಕಸಾಪ, ತಾ. ಕಜಾಪ ಹಾಗೂ ಸಾಹಿತ್ಯ ಸಂಗಮ ಇವರ ಸಹಯೋಗದಲ್ಲಿ ಹಮ್ಮಿಕೊಂಡ, ಪುರಂದರದಾಸರ ಆರಾಧನೆ ಹಾಗೂ ಕುಮಾರವ್ಯಾಸ ಜಯಂತಿ ಕಾರ್ಯಕ್ರಮದಲ್ಲಿ ಅವರು ಪುರಂದರದಾಸರ ಕುರಿತು ಉಪನ್ಯಾಸ ನೀಡಿದರು.

ಪುರಂದರ ದಾಸರ ಕೃತಿಗಳ ಸಾರ ಮಾನವ ಜನ್ಮದ ಕಲ್ಯಾಣವಾಗಿದೆ. ಅವರ ಕೃತಿಗಳಲ್ಲಿ ಉನ್ನತ ಮೌಲ್ಯಗಳಿವೆ ಎಂದು ಹೇಳಿದರು.

ಕುಮಾರವ್ಯಾಸ ಜಯಂತಿಯ ಅಂಗವಾಗಿ 'ಶ್ರೀ ಕೃಷ್ಣ ಸಂಧಾನ' ಕಥಾ ಭಾಗವನ್ನು ಚಿತ್ರದುರ್ಗದ ಚಂಪಕಾ ಶ್ರೀಧರ್ ವಾಚಿಸಿದರೆ, ಮತ್ತೂರಿನ ವಿದ್ವಾನ್ ಅಚ್ಯುತ್ ಅವಧಾನಿಗಳು ವ್ಯಾಖ್ಯಾನಿಸಿದರು.

ಮುಖ್ಯ ಅತಿಥಿಯಾಗಿ ಹರಿಹರ ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ ಹಾಗೂ ತಾ. ಕಜಾಪ ಅಧ್ಯಕ್ಷ ಬಿ ಬಿ ರೇವಣ ನಾಯ್ಕ ಲಕ್ಷ್ಮೀಶ ಕಲಾ ಸಂಘದ ಸದಸ್ಯರಾದ ದಿನೇಶ್ ಕೊಣ್ಣೂರು ಉಪಸ್ಥಿತರಿದ್ದರು. ಇತ್ತೀಚಿಗೆ ನಿಧನರಾದ ಗಮಕಿ ಮತ್ತೂರಿನ ಪದ್ಮಶ್ರೀ ಹೆಚ್. ಆರ್. ಕೇಶವಮೂರ್ತಿ ಹಾಗೂ ಹರಿಹರದ ಉದ್ಯಮಿ ತುಕಾಮಣಿಸಾ ಭೂತೆ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಲಕ್ಷ್ಮೀಶ ಕಲಾ ಸಂಘದ ಅಧ್ಯಕ್ಷ ಎಸ್. ಹೆಚ್. ಹೂಗಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿ.ವಿ. ಸೃಷ್ಟಿ ಪ್ರಾರ್ಥಿಸಿದರು. ಉಪಾಧ್ಯಕ್ಷೆ ಚಂದ್ರಕಲಾ ಸುರೇಶ್ ನಾಯಕ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಸುಜಾತ ಗೋಪಿನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶ್ ವಂದಿಸಿದರು.

ಮಲೇಬೆನ್ನೂರಿನಲ್ಲಿ ಸಿದ್ದಗಂಗಾ ಶ್ರೀ ಸ್ಮರಣೆ

ಮಲೇಬೆನ್ನೂರು, ಜ.22- ಪಟ್ಟಣದ ಜಿಗಳಿ ವೃತ್ತದಲ್ಲಿ ತ್ರಿವಿಧ ದಾಸೋಹಿ ಶ್ರೀ ಡಾ. ಶಿವಕುಮಾರ ಮಹಾಸ್ವಾಮೀಜಿಯವರ 4ನೇ ವರ್ಷದ ಪುಣ್ಯಸ್ಮರಣೆ ಹಾಗೂ ಮಹಾಸಂತ, ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮಿಗಳವರ ಸ್ಮರಣೆ ಅಂಗವಾಗಿ ಯುವ ಭಕ್ತ ವೃಂದ ಅನ್ನ ಸಂತರ್ಪಣೆ ಏರ್ಪಡಿಸಿತ್ತು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಜಿ. ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ಉಪತಹಶೀಲ್ದಾರ್ ಆರ್.ರವಿ, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಸಾಬೀರ್ ಅಲಿ, ಕೆ.ಪಿ.ಗಂಗಾಧರ್, ಪಿ.ಆರ್.ರಾಜು, ಎ.ಕೆ.ಲೋಕೇಶ್, ಬಿ.ಮಂಜುನಾಥ್, ಭೋವಿ ಮಂಜಣ್ಣ, ಶಿಕ್ಷಕ ಪೂಜಾರ್ ಹಾಲೇಶ್, ಹಳ್ಳಿಹಾಳ್ ವೀರನಗೌಡ, ಧರ್ಮಸ್ಥಳ ಯೋಜನೆಯ ಮೇಲ್ವಿಚಾರಕಿ ಶ್ರೀಮತಿ ಪದ್ಮಾವತಿ, ಕುಂಬಳೂರು ವಾಸು, ಜಿಗಳಿಯ ನಾಗಸನಹಳ್ಳಿ ಬಸವರಾಜ್, ಕಾರ್ಯಕ್ರಮದ ಸಂಘಟಕರಾದ ಬಿ.ಸಿ.ರಾಜೇಶ್, ಹೊಸಳ್ಳಿ ಕರಿಬಸಪ್ಪ, ಎಂ.ಕೆ.ಗಜೇಂದ್ರಯ್ಯ, ಬಟ್ಟೆ ಅಂಗಡಿ ವಿಶ್ವ, ಬಟ್ಟೆ ಅಂಗಡಿ ಗಾಂಧಿ, ಕುಡಪಲಿ ರಮೇಶ್, ಪ್ರಕಾಶ್ ರೈಸ್‌ಮಿಲ್ ಕೊಟ್ರೇಶ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ಹೆಚ್.ಎಂ.ಸದಾನಂದ, ಟಿ.ಹೆಚ್.ಶಿವಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ತಾರೆಹಳ್ಳಿಯಲ್ಲಿ ನಾಳೆ ಶ್ರೀ ಮಾಸ್ತಮ್ಮ ದೇವಿ ಮೂರ್ತಿ ಪ್ರತಿಷ್ಠಾಪನೆ

ಜಗಳೂರು ತಾಲ್ಲೂಕಿನ ತಾರೆಹಳ್ಳಿಯಲ್ಲಿ ಶ್ರೀ ಮಾಸ್ತಮ್ಮ ದೇವಿಯ ನೂತನ ದೇವಾಲಯದ ಪ್ರವೇಶ ಮತ್ತು ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮವು ನಾಳೆ ಮಂಗಳವಾರ ಬ್ರಾಹ್ಮೀ ಮುಹೂರ್ತದಲ್ಲಿ ಕೋಣಂದೂರಿನ ಶ್ರೀ ಡಾ. ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ಕ್ಯಾರೆಕಟ್ಟೆ ಶ್ರೀ ಅಜ್ಜಯ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಂಗವಾಗಿ ಇಂದು ಸಂಜೆ 4.30 ಕ್ಕೆ ಗಂಗಾಪೂಜೆ ಸ್ವಾಮಿಗಳ ಮೆರವಣಿಗೆ ಉತ್ಸವ ನಡೆಯುವುದು.

ನಾಳೆ ಮಂಗಳವಾರ ಬ್ರಾಹ್ಮೀ ಮುಹೂರ್ತದಲ್ಲಿ ದೇವಸ್ಥಾನದಲ್ಲಿ ಮಹಾಗಣಪತಿ ಪೂಜೆ, ಕಂಕಣ ಧಾರಣೆ ಮತ್ತು ವಾಸ್ತು ಗಣಪತಿ, ನವಗ್ರಹ ಹಾಗೂ ಹೋಮ ತೀರ್ಥ ಪ್ರಸಾದ ನಡೆಯುವುದು.

ಕಾರ್ಯಕ್ರಮದ ಅಂಗವಾಗಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಬಳ್ಳಾರಿ ಸಂಸದ ಬಿ. ದೇವೇಂದ್ರಪ್ಪ, ಶಾಸಕ ಎಸ್.ವಿ. ರಾಮಚಂದ್ರಪ್ಪ, ಹೆಚ್.ಪಿ. ರಾಜೇಶ್, ಹೆಚ್.ಸಿ. ಮಹೇಶಪ್ಪ, ವೈ.ಕೆ. ಮಂಜಪ್ಪ, ಬಿ.ಜಿ. ಕೆಂಚನಗೌಡ್ರು, ಪಾಲಯ್ಯ, ದೇವೇಂದ್ರಪ್ಪ, ಜಿ. ಗೋವಿಂದಪ್ಪ, ಶ್ರೀಮತಿ ಸುಶೀಲಮ್ಮ ಚನ್ನಪ್ಪ, ಟಿ.ವಿ. ಚಂದ್ರಪ್ಪ, ಜಿ.ಡಿ. ಪ್ರಕಾಶ್, ಶ್ರೀಮತಿ ಶಿವಗಂಗಮ್ಮ, ಶ್ರೀಮತಿ ಮಂಜಮ್ಮ ಎಂ.ಆರ್. ಮುರುಗೇಶ್, ಕೆ.ಎಸ್. ಪ್ರವೀಣ್ ಮತ್ತು ಇತರರು ಆಗಮಿಸುವರು.

ಮೆಳ್ಳೇಕಟ್ಟೆಯಲ್ಲಿಂದು ಶಾಲಾ ಉತ್ಸವ

ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆಯಲ್ಲಿ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಇಂದು ಸಂಜೆ 4.30 ಕ್ಕೆ ತರಳಬಾಳು ಶಾಲಾ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ತರಳಬಾಳು ಸ್ಥಳೀಯ ಶಾಲಾ ಸಲಹಾ ಸಮಿತಿ ಅಧ್ಯಕ್ಷ ಸಿ.ಎಸ್. ಚಂದ್ರಶೇಖರ್ ಅಧ್ಯಕ್ಷತೆ ವಹಿಸು ವರು. ಜನತಾವಾಣಿ ಸಂಪಾದಕ ಎಂ.ಎಸ್. ವಿಕಾಸ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಅಣಜಿ ಗ್ರಾ. ಪಂ. ಅಧ್ಯಕ್ಷೆ ಪುಷ್ಪಾ ದೇವೇಂದ್ರಪ್ಪ, ಶ್ರೀ ತರಳಬಾಳು ಸ್ಥಳೀಯ ಶಾಲಾ ಸಲಹಾ ಸಮಿತಿ ಉಪಾಧ್ಯಕ್ಷ ಕೆ.ಜಿ. ಗುರುಬಸಪ್ಪ, ಶ್ರೀ ತರಳಬಾಳು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಜಿ. ಶಿವನಗೌಡ್ರು ಮತ್ತಿತರರು ಭಾಗವಹಿಸಲಿದ್ದಾರೆ. ಬಿಇಎ ಪೌಢ ಶಾಲೆಯ ಕೆ.ಎಂ. ಗಿರಿಜಾ ಹಾಗೂ ನಾಟಿ ವೈದ್ಯ ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಡಾ.ಎಸ್.ಎಸ್. ವೆಂಕಟರಾಮಾಂಜನೇಯ ಸ್ವಾಮಿ ಉಪನ್ಯಾಸ ನೀಡಲಿದ್ದಾರೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಚನಾಗೆ ದ್ವಿತೀಯ ಸ್ಥಾನ

ದಾವಣಗೆರೆ, ಜ. 22- ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ಬಿಇಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ದಾವಣಗೆರೆ ವಿವಿ ಅಂತರ ಕಾಲೇಜು ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಅರ್ಚನಾ ಗಾಯಕವಾಡ್ ದ್ವಿತೀಯ ಸ್ಥಾನ ಪಡೆದಿದ್ದಾರೆ. ಸಾನಿಯ ಸುಜೈನ್ ತೃತೀಯ ಸ್ಥಾನ ಪಡೆದಿದ್ದು, ಈ ವಿದ್ಯಾರ್ಥಿನಿಯರಿಗೆ ಕಾಲೇಜಿನ ಪ್ರಾಚಾರ್ಯರು, ಉಪ ಪ್ರಾಚಾರ್ಯರು, ಬೋಧಕರು ಅಭಿನಂದಿಸಿದ್ದಾರೆ.

ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

ಹೊಲಿಗೆ ಯಂತ್ರ ವಿತರಣೆಗೆ ಅರ್ಜಿ ಆಹ್ವಾನ

ದಾವಣಗೆರೆ, ಜ.22- ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗದವರಿಗೆ ಹೊಲಿಗೆ ಯಂತ್ರ ವಿತರಣೆ ಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಫೆಬ್ರವರಿ 23 ವರೆಗೆ ಅರ್ಜಿಗಳನ್ನು ಸಲ್ಲಿಸಬಹುದು.

ವೆಬ್‌ಸೈಟ್ www.dbcdc.karnataka.gov.in ನಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ದೂ. ಸಂ:080 -22374832, 8050770004, 80507 70006, 70904 00100/ 7090400900 ದೂರವಾಣಿ ಸಂಖ್ಯೆ: 08192-230934 ಸಂಪರ್ಕಿಸಬಹುದೆಂದು ಜಿಲ್ಲಾ ವ್ಯವಸ್ಥಾಪಕ ಸಾತ್ವಿಕ್ ಹೆಚ್.ಸಿ ತಿಳಿಸಿದ್ದಾರೆ.

'ವಜ್ರೇಶ್ವರಿ' ಯಿಂದ ಹೊಸ ವರ್ಷ

ದಾವಣಗೆರೆ, ಜ. 22- ನಗರದ ವಜ್ರೇಶ್ವರಿ ಮಹಿಳಾ ಸಂಸ್ಥೆಯಿಂದ ಹೊಸ ವರ್ಷ ಹಾಗೂ ಕ್ರಿಸ್‌ಮಸ್ ಆಚರಣೆಯನ್ನು ಎಂಸಿಸಿ ಎ ಬ್ಲಾಕ್‌ನಲ್ಲಿರುವ ಚರ್ಚ್‌ನಲ್ಲಿ ಆಚರಿಸಿದರು.

ವಜ್ರೇಶ್ವರಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ವಿಜಯ ಸಿ. ಅಕ್ಕಿ ಅವರು ನಡೆಸಿದ ಕಾರ್ಯಕ್ರಮದಲ್ಲಿ ಫಾದರ್ ಆಂಥೋನಿ, ವಜ್ರೇಶ್ವರಿ ಸಂಸ್ಥೆಯ ಕಮಿಟಿ ಸದಸ್ಯರುಗಳು ಭಾಗವಹಿಸಿದ್ದರು. ಗೀತಾ ಪ್ರಭಾಕರ್, ಶಶಿಪ್ರಕಾಶ್, ರೇಖಾ ಮಂಜುಳ, ಐಷು ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಅಭಿಯಾನ

(1ನೇ ಪುಟದಿಂದ) ಹರಿಯಾಣಗಳ 2 ಹಾಗೂ ಮಹಾರಾಷ್ಟ್ರ ಮತ್ತು ಲಕ್ಷ ದ್ವೀಪಗಳ 1 ಲೋಕಸಭಾ ಕ್ಷೇತ್ರವನ್ನು ಈ ಅಭಿಯಾನಕ್ಕೆ ಗುರುತಿಸಲಾಗಿದೆ. ಈ ಅಭಿಯಾನದ ವೇಳೆ ಬಿಜೆಪಿ ಕಾರ್ಯಕರ್ತರು ವೈದ್ಯರು, ವಕೀಲರೂ ಸೇರಿದಂತೆ ವೃತ್ತಿಪರರು ಹಾಗೂ ಧಾರ್ಮಿಕ ಮುಖಂಡರನ್ನು ಸಂಪರ್ಕಿಸಲಿದ್ದಾರೆ.

ಸೈನಿಕ ಕಲ್ಯಾಣ ಎಸ್.ಡಿ.ಸಿ. ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ಮಾಹಿತಿ

ದಾವಣಗೆರೆ ಜ. 22 - ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಸಿ ವೃಂದದ ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಆಯೋಜಿಸುವ ಸ್ಪರ್ಧಾತ್ಮಕ ಪರೀಕ್ಷೆಯ ತಿದ್ದುಪಡಿ ಆದೇಶ ಪ್ರಕಟಿಸಲಾಗಿದೆ.

ತಿದ್ದುಪಡಿ ಆದೇಶದಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ-1 , ಸಾಮಾನ್ಯ ಜ್ಞಾನ ಹಾಗೂ ಪ್ರಶ್ನೆ ಪತ್ರಿಕೆ-2 ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲಿಷ್, ಕಂಪ್ಯೂಟರ್ ಜ್ಞಾನ ಎಂದು ಓದಿಕೊಳ್ಳಬೇಕು. ಈ ಕುರಿತಂತೆ ಕರ್ನಾಟಕ ರಾಜ್ಯ ಪತ್ರ 13 ದಿನಾಂಕ 13-01-2023ರ ಸಂಚಿಕೆ 215 ಭಾಗ 5ರಲ್ಲಿ ಪರೀಕ್ಷಾರ್ಥಿಗಳು ಪೂರ್ಣ ಮಾಹಿತಿಯನ್ನು ಪಡೆಯಲು ಕೋರಲಾಗಿದೆ.

ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಕಚೇರಿ ದೂ. ಸಂ. 08182-220925 ಸಂಪರ್ಕಿಸಲು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿಲ್ಶಾದ್ ಬೇಗಂ ನಿಧನ

ದಾವಣಗೆರೆ ವಿನೋಬಾನಗರ #4000/2B
2ನೇ ಮೇನ್, 12ನೇ ಕ್ರಾಸ್, ಬನ್ನೂರು ಮೆಡಿಕಲ್ ಶಾಪ್ ಹತ್ತಿರದ ವಾಸಿ ಜಿ.ರಾಮಪ್ಪ ಇವರ ಧರ್ಮಪತ್ನಿ
ದಿಲ್ಶಾದ್ ಬೇಗಂ (68)
ಇವರು ದಿನಾಂಕ 22.1.2023ರ ಭಾನುವಾರ ಸಂಜೆ 6 ಗಂಟೆಗೆ ನಿಧನರಾದರು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.01.2023ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ವಿನೋಬ ನಗರದ ಪಿ.ಬಿ ರಸ್ತೆಯಲ್ಲಿರುವ ಖಬರಸ್ತಾನದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ - ಮೊ : 99005 16143

ಶ್ರೀಮತಿ ಆನಂದ ರತ್ನಮ್ಮ ಹರಿಪಾದ ಸೇರಿದರು

ದಾವಣಗೆರೆಯ ಶ್ರೀ ಕಲ್ಪವೃಕ್ಷ ಪ್ರಿಂಟರ್ಸ್ ಮಾಲೀಕರಾದ
ಶ್ರೀ ಹೆಚ್. ರಂಗನಾಥ್‌ರವರ ಮಾತೃಶ್ರೀಯವರಾದ
ಶ್ರೀಮತಿ ಆನಂದ ರತ್ನಮ್ಮ ರವರು
ದಿನಾಂಕ 22-01-2023ರ ಭಾನುವಾರ ರಾತ್ರಿ 8.30 ಕ್ಕೆ ಹರಿಪಾದ ಸೇರಿದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಐದು ಜನ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23-01-2023ರ ಸೋಮವಾರ ಬೆಳಿಗ್ಗೆ 9.30 ಕ್ಕೆ ಹಳೇ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. 99727 99992

ಹೋಟೆಲ್‌ಗೆ ವಂಚನೆ

(1ನೇ ಪುಟದಿಂದ) 19ರಂದು ಬಂಧಿಸಲಾಗಿದೆ.

ಯುಎಇ ಸರ್ಕಾರದ ಅಧಿಕಾರಿ ಎಂದು ಹೇಳಿಕೊಂಡಿದ್ದ ಶರೀಫ್, ನಕಲಿ ಉದ್ಯಮದ ಪರಿಚಯ ಚೀಟಿ ಹೊಂದಿದ್ದ. ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಈತ 11.5 ಲಕ್ಷ ರೂ.ಗಳನ್ನು ಪಾವತಿಸಿದ್ದ. ಆದರೂ 23.48 ಲಕ್ಷ ರೂ. ಕೊಡುವುದು ಬಾಕಿ ಇತ್ತು. ಇದಕ್ಕಾಗಿ ಆತ 20 ಲಕ್ಷ ರೂ.ಗಳ ಚೆಕ್ ನೀಡಿದ್ದ. ಆದರೆ, ಹಣವಿಲ್ಲದೇ ಚೆಕ್ ಬೌನ್ಸ್ ಆಗಿತ್ತು. ನಂತರ ಆತ ಹೋಟೆಲ್‌ನಿಂದ ಬೆಲೆಬಾಳುವ ವಸ್ತುಗಳೊಂದಿಗೆ ಪರಾರಿಯಾಗಿದ್ದ.

ಎರೇಬೂದಿಹಾಳ್ ದೊಡ್ಡಬಸಪ್ಪ ಬಸಪ್ಪ ನಿಧನ

ಹರಿಹರ ತಾಲ್ಲೂಕು ಎರೇಬೂದಿಹಾಳ್ ವಾಸಿ, ನಿವೃತ್ತ ಶಿಕ್ಷಕರಾದ ದೊಡ್ಡಬಸಪ್ಪ ಬಸಪ್ಪ (88) ಅವರು ದಿನಾಂಕ 22.01.2023ರ ಭಾನುವಾರ ಮಧ್ಯಾಹ್ನ 12.45ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.01.2023ರ ಸೋಮವಾರ ಬೆಳಿಗ್ಗೆ 10.30 ಕ್ಕೆ ಸ್ವಗ್ರಾಮ ಎರೇಬೂದಿಹಾಳ್‌ನ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ಅತಿ ಸಣ್ಣ ಕುಶಲ ಕರ್ಮಿಗಳಿಗೆ ಸಾಲ

ದಾವಣಗೆರೆ, ಜ.22- ಜಿಲ್ಲೆಯ ಅತಿ ಸಣ್ಣ ವೃತ್ತಿಪರ ಕುಶಲಕರ್ಮಿಗಳಿಗಾಗಿ ಸಾಲ-ಸಹಾಯಧನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಕುಶಲಕರ್ಮಿಗಳು ಆರ್ಥಿಕ ಸಮಸ್ಯೆಯನ್ನು ನಿವಾರಿಸಿಕೊಂಡು ತಮ್ಮ ವೃತ್ತಿ, ಚಟುವಟಿಕೆಯನ್ನು ಮುಂದುವರೆಸಲು ವಾಣಿಜ್ಯ, ಸಹಕಾರ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಂದ 50000/- ರೂ.ಗಳವರೆಗೆ ಸಾಲ ಸೌಲಭ್ಯ ಪಡೆಯಬಹುದು.

ಕಮ್ಮಾರಿಕೆ, ಬುಟ್ಟಿ ಹೆಣೆಯುವುದು, ಬಡಗಿತನ, ಆಭರಣ ತಯಾರಿಕೆ, ಕಲ್ಲಿನ ಕೆತ್ತನೆ, ಮರದ ಕೆತ್ತನೆ, ಕುಂಬಾರಿಕೆ, ಮಣ್ಣಿನ ವಿಗ್ರಹ ತಯಾರಿಕೆ, ಲೋಹದ ಕರಕುಶಲ, ಬೆತ್ತ ಮತ್ತು ಬಿದಿರು ಉತ್ಪನ್ನ ವಸ್ತುಗಳು, ಲಂಬಾಣಿ ಕಸೂತಿ,ಕಸೂತಿ, ಕಂಬಳಿ ನೇಯುವುದು, ಚಾಪೆ ಹೆಣೆಯುವುದು ವೃತ್ತಿಪರ ಕುಶಲಕರ್ಮಿಗಳಿಗೆ ಗರಿಷ್ಠ ರೂ.15000/- ಸಹಾಯಧನ ಸಾಲದ ಖಾತೆಗೆ ಜಮಾ ಮಾಡಲಾಗುವುದು. ವೃತ್ತಿಪರ ಕುಶಲ ಕರ್ಮಿಗಳು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 25 ರೊಳಗಾಗಿ ಕಚೇರಿಗೆ ಸಲ್ಲಿಸಬೇಕೆಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಹರಿಹರ: ಬಿಜೆಪಿಯಿಂದ ವಿಜಯ ಸಂಕಲ್ಪ

(1ನೇ ಪುಟದಿಂದ) ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ ಪೂಜಾರ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಗ್ರಾಮಾಂತರ ಅಧ್ಯಕ್ಷ ಎಂ.ಪಿ ಲಿಂಗರಾಜ್, ಪ್ರಧಾನ ಕಾರ್ಯದರ್ಶಿ ಗಳಾದ ತುಳಜಪ್ಪ ಭೂತೆ, ಮಂಜಾನಾಯ್ಕ, ವಿರೇಶ ಆದಾಪುರ, ನಗರಸಭೆ ಸದಸ್ಯರಾದ ರಜನಿಕಾಂತ, ಆಟೋ ಹನುಮಂತಪ್ಪ, ವಿಜಯ ಸಂಕಲ್ಪ ಅಭಿಯಾನ ಸಂಚಾಲಕ ವಿಜಯಕುಮಾರ ಎಬಿಎಂ, ಜಿಲ್ಲಾ ಕಾರ್ಯದರ್ಶಿ ರೂಪಾ ಕಾಟವೆ ಕಾರ್ಯಕ್ರಮ ಕುರಿತು ಮಾತನಾಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಬಾತಿ ಚಂದ್ರಶೇಖರ, ರಾಜು ರೋಖಡೆ, ರಾಘವೇಂದ್ರ ಕಾಮದೇನು, ಸುರೇಶ ತೆರೆದಹಳ್ಳಿ, ನ್ಯಾಯವಾದಿ ಆನಂದ್, ಸಂತೋಷ ಗುಡಿಮನಿ, ರವಿ ರಾಯ್ಕರ್, ರವಿರಾಜ, ರಾಜು ಐರಣಿ, ಸುನಿಲ್, ವಿನಾಯಕ ಆರಾದ್ಯ, ಅಜ್ಜಪ್ಪ ಶೇರಾಪುರ, ಲೋಕಿಕೆರೆ ಅಣ್ಣಪ್ಪ, ಚಂದ್ರು ಪಾಟೀಲ, ನಿರಂಜನ ಉಪಸ್ಥಿತರಿದ್ದರು.

ನಾಳೆ ಧರಣಿ

(1ನೇ ಪುಟದಿಂದ) 2021ರಲ್ಲಿ ನೌಕರರು ಮುಷ್ಕರ ನಡೆಸಿದ್ದರು. ನಂತರ ಸರ್ಕಾರ ಹಲವಾರು ಭರವಸೆಗಳನ್ನು ನೀಡಿತ್ತಾದರೂ, ಅವುಗಳು ಇನ್ನೂ ಈಡೇರಿಲ್ಲ. ಹೀಗಾಗಿ ಧರಣಿಗೆ ನಿರ್ಧರಿಸಲಾಗಿದೆ. ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆಯಾಗಬೇಕಿತ್ತು. ಆದರೆ, ಆರು ವರ್ಷಗಳಿಂದ ಪರಿಷ್ಕರಣೆಯಾಗಿಲ್ಲ ಎಂದು ನೌಕರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಶಾಲೆಯ ಶಿಕ್ಷಕರ ಸೇವೆ ಅನನ್ಯ

ಗ್ರಾ.ಪಂ ಸದಸ್ಯ ಪ್ರವೀಣ್ ಆರ್.ಬಿ ಮೆಚ್ಚುಗೆ

ಹರಿಹರ, ಜ. 22- ಆಡಳಿತ ಸರ್ಕಾರಗಳು ಶಿಕ್ಷಣದ ಮೌಲ್ಯವನ್ನು ಹೆಚ್ಚಿಸಲು ದಿನಕ್ಕೊಂದು ಹೊಸ ಯೋಜನೆಗಳನ್ನು ಜಾರಿ ಮಾಡುತ್ತವೆ, ಅವುಗಳನ್ನು ಅನುಷ್ಠಾನಿಸಲು ಸರ್ಕಾರಿ ಶಾಲೆಗಳ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ಹನಗವಾಡಿ ಗ್ರಾಮ ಪಂಚಾಯಿತಿ ಸದಸ್ಯ ಪ್ರವೀಣ್ ಆರ್.ಬಿ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕಿನ ಹನಗವಾಡಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಬೆಳ್ಳೂಡಿ ಕ್ಲಸ್ಟರ್ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳ ಶಿಕ್ಷಕರು ಸರ್ಕಾರಗಳು ನೀಡುವ ಎಲ್ಲಾ ಕೆಲಸಗಳನ್ನೂ ಸಹ ಜವಾಬ್ದಾರಿಯುತವಾಗಿ ಮಾಡುತ್ತಿದ್ದಾರೆ. ಮಕ್ಕಳ ಕಲಿಕೆಯನ್ನು ಹೆಚ್ಚಿಸುವ ನಿಟ್ಟನಲ್ಲಿ ಈ ಕಲಿಕಾ ಹಬ್ಬವನ್ನು ಆಚರಿಸುತ್ತಿರುವುದು ಶ್ಲಾಘನೀಯ.

ವಿದ್ಯಾರ್ಥಿಗಳು ಮೊಬೈಲ್ ಮತ್ತು ಟಿ.ವಿ ನೋಡುವುದನ್ನು ಬಿಟ್ಟು ಕಲಿಕೆಯ ಕಡೆ ಮನಸ್ಸನ್ನು ಕಟ್ಟಿ ಹಾಕಬೇಕು. ನೀವುಗಳು ಉತ್ತಮ ಪ್ರಜೆಗಳಾಗಿ, ಉನ್ನತ ಹುದ್ದೆಗಳನ್ನು ಪಡೆದರೆ ನಿಮಗೆ ಕಲಿಸಿದ ಶಿಕ್ಷಕರ ಕೀರ್ತಿ ಹೆಚ್ಚುತ್ತದೆ ಎಂದು ಸಲಹೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿನ ಮಕ್ಕಳ ಕಲಿಕೆಗೆ ಒತ್ತು ನೀಡಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಕೋವಿಡ್ ನಂತರ ಸರ್ಕಾರಿ ಶಾಲೆಗಳ ಕಲಿಕಾ ವಿಧಾನದಲ್ಲಿ ಅನೇಕ ಬದಲಾವಣೆಗಳಾಗಿವೆ ಎಂದು ಹೇಳಿದರು.

ಬಿಆರ್‌ಸಿ ಕೃಷ್ಣಪ್ಪ ಮಾತನಾಡಿ, ಕೋವಿಡ್ ಪರಿಣಾಮದಿಂದಾಗಿ ಸುಮಾರು ಎರಡು ವರ್ಷಗಳ ಕಾಲ ಶಾಲೆಯಲ್ಲಿ ಮಗುವಿನ ಕಲಿಕೆ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ. ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿ ಕಲಿಯಬೇಕಾದ ವಿಷಯ ವಸ್ತುವನ್ನು ಕಲಿತಿಲ್ಲ, ಅದನ್ನು ಸರಿದೂಗಿಸಲು ಸರ್ಕಾರ ಈ ಕಲಿಕಾ ಹಬ್ಬವನ್ನು ಜಾರಿ ಮಾಡಿದೆ ಎಂದು ತಿಳಿಸಿದರು.

ಈ ವೇಳೆ ಹನಗವಾಡಿ ಗ್ರಾ.ಪಂ ಅಧ್ಯಕ್ಷರಾದ ಕವಿತಾ ಕೆ.ಟಿ, ಉಪಾಧ್ಯಕ್ಷರಾದ ಎಸ್.ಎಂ. ರೇವಣಸಿದ್ದೇಶ್, ಮಾಜಿ ಅಧ್ಯಕ್ಷರಾದ ಸವಿತಾ ಶೇಖರಪ್ಪ, ಲಕ್ಷ್ಮವ್ವ ವಾಮದೇವ, ಸದಸ್ಯರಾದ ದ್ರಾಕ್ಷಾಯಣಮ್ಮ, ಸುಜಾತ, ಶಾರದಮ್ಮ, ಹನುಮಂತಪ್ಪ, ಪುಷ್ಪಾ, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಗೌಡ್ರ ನಾಗರಾಜ್, ಸಂಜೀವ್ ಬಣಕಾರ್, ಅಕ್ಷರ ದಾಸೋಹ ಅಧಿಕಾರಿ ರಾಮಕೃಷ್ಣಪ್ಪ, ಮಂಜುಳಾ, ಆರ್.ಪಿ.ಗಳಾದ ಸುರೇಶ್ ಹಂಚನಗೌಡ್ರು, ಮುಜಾಹಿದ್, ಸುಶೀಲಮ್ಮ, ರೇಣುಕಮ್ಮ, ನಾಗರಾಜ್, ತೀರ್ಥಪ್ಪ, ಮಂಜುನಾಥ್, ಲಿಂಗರಾಜ್, ಮುಖ್ಯಶಿಕ್ಷಕರಾದ ಕುಬೇಂದ್ರ, ಮೆಕ್ಕಪ್ಪನವರ್, ಗದಿಗೆಪ್ಪ ಹಳೆಮನಿ, ಬೆಳ್ಳೂಡಿ ಮತ್ತು ಹನಗವಾಡಿ ಶಾಲೆಗಳ ಶಿಕ್ಷಕ ವೃಂದದವರು ಹಾಜರಿದ್ದರು.

ಇಂದು ನವಯುಗದ ಪ್ರಣಾಳಿಕೆ ಬಿಡುಗಡೆ

ರಾಣೇಬೆನ್ನೂರು

ರಾಣೇಬೆನ್ನೂರು, ಜ.22- ನಗರದ ದನದ ಮಾರುಕಟ್ಟೆಯ ಮುಂಭಾಗದ ಜಾಗದಲ್ಲಿ ನಾಳೆ ದಿನಾಂಕ 23ರ ಸೋಮವಾರ ಸುಭಾಷ್‌ಚಂದ್ರ ಬೋಸ್ ಜನ್ಮದಿನದ ಅಂಗವಾಗಿ ನವಯುಗದ ವತಿಯಿಂದ ಪ್ರಣಾಳಿಕೆ ಬಿಡುಗಡೆ ಸಮಾರಂಭದ ಅಂಗವಾಗಿ ಭಾನುವಾರ ರೊಟ್ಟಿ ಬುತ್ತಿಯ ಮೆರವಣಿಗೆ ನಡೆಯಿತು.

ಇಲ್ಲಿನ ಕೆಇಬಿ ವಿನಾಯಕ ದೇವಸ್ಥಾನದಿಂದ ಆರಂಭವಾದ ಮೆರವಣಿಗೆ ಬಸ್‌ನಿಲ್ದಾಣ, ಮೇಡ್ಲೇರಿ ರಸ್ತೆಯ ಸರ್ಕಲ್, ಅಂಚೆ ಕಚೇರಿ, ಎಂ.ಜಿ.ರೋಡ್, ಕುರುಬಗೇರಿ ಕ್ರಾಸ್ ಸಂಚರಿಸಿ, ರಾಜ್ಯ ಹೆದ್ದಾರಿ ಮೂಲಕ ಕಾರ್ಯಕ್ರಮ ನಡೆಯುವ ಸ್ಥಳ ತಲುಪಿತು.

ಮೆರವಣಿಗೆಯಲ್ಲಿ ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಹಳ್ಳಿಯಿಂದ ಟ್ರ್ಯಾಕ್ಟರ್ ಮೂಲಕ ಸಾವಿರಾರು ರೊಟ್ಟಿಗಳನ್ನು ತರಲಾಗಿತ್ತು. ಸಂತೋಷಕುಮಾರ ಪಾಟೀಲ ಅಭಿಮಾನಿ ಬಳಗದ ಅಧ್ಯಕ್ಷ ಯುವರಾಜ ಬಾರಾಟಕ್ಕೆ, ತಿಮ್ಮನ ಗೌಡ ಪಾಟೀಲ, ವೀರು ಪಾಟೀಲ, ಮಂಜು ಸಿರಿಗೆರೆ, ಕಿರಣ ಬುಳ್ಳನಗೌಡ್ರ, ಕುಬೇರಪ್ಪ ಅಟ ವಾಳಗಿ, ದಾದಾಪೀರ್ ಕೋಳೂರ, ಸಲೀಂ ಕಟಾರಿ, ಬಸವರಾಜ ಕರೂರ, ಗಂಗಾಧರ ಬೂದನೂರ, ಬಿ.ಟಿ.ಪಾಟೀಲ ಸೇರಿದಂತೆ ಇತರರಿದ್ದರು.

ಹೆಚ್ಚು ಉಪ ಉತ್ಪನ್ನ ನೀಡುವ ಲಾಭದಾಯಕ ಬೆಳೆ ತೆಂಗು

'ತೆಂಗಿನ ಮರದ ಸ್ನೇಹಿತರು' ಕೌಶಲ್ಯಾಭಿವೃದ್ಧಿ ತರಬೇತಿಯಲ್ಲಿ ಎಂ.ಜಿ. ಬಸವನಗೌಡ

ದಾವಣಗೆರೆ, ಜ.22- ತೋಟಗಾರಿಕೆ ಬೆಳೆಗಳಲ್ಲಿ ನಿಯಮಿತ ಆದಾಯ ಮತ್ತು ಅತೀ ಹೆಚ್ಚು ಉಪ ಉತ್ಪನ್ನ ಗಳನ್ನು ನೀಡುವ ಬೆಳೆ ಕಲ್ಪವೃಕ್ಷ ತೆಂಗು. ಇದರ ಸಂರಕ್ಷಣೆ ಮತ್ತು ಸಂಸ್ಕರಣೆ ನಮ್ಮೆಲ್ಲರ ಹೊಣೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ತಿಳಿಸಿದರು.

ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು ಹಾಗೂ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 6 ದಿನಗಳ 'ತೆಂಗಿನ ಮರದ ಸ್ನೇಹಿತರು' ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಇಂದು ತೆಂಗಿನ ಬೇಸಾಯದ ಉತ್ಪಾದನಾ ತೊಡಕುಗಳಲ್ಲಿ ಕಾಯಿ ಕೀಳುವವರ ಲಭ್ಯತೆಯೂ ಒಂದು. ಕೃಷಿಯಲ್ಲಿ ಕಾರ್ಮಿಕರ ಕೊರತೆಯನ್ನು ನೀಗಿಸಲು ಇಂತಹ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು ಸಹಕಾರಿಯಾಗಲಿದ್ದು, ಆದಾಯೋತ್ಪನ್ನ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರೂ ಆದ ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ಸಿ.ಟಿ. ಚಂದ್ರಪ್ಪ ಮಾತನಾಡಿ ಗ್ರಾಮೀಣ ಭಾಗದಲ್ಲಿ ಕೃಷಿ ಚಟುವಟಿಕೆಗಳಲ್ಲಿ ಕೌಶಲ್ಯದ ಬಳಕೆ ತುಂಬಾ ಸಹಕಾರಿಯಾಗುತ್ತದೆ. ಅಡಿಕೆ ಬೆಳೆಯ ವಿಸ್ತೀರ್ಣದಿಂದ ಇಂದು ತೆಂಗಿನ ಬೆಳೆಯಲ್ಲಿ ಮಲತಾಯಿ ಧೋರಣೆ ಅನುಭವಿಸುತ್ತಿದೆ. ತೆಂಗಿನ ಉಪ ಉತ್ಪನ್ನಗಳಿಂದ ಇಂದು ಉತ್ತಮ ಆದಾಯ ಗಳಿಸಲು ಸಾಧ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ ಮಾತನಾಡಿ, ಶತಮಾನಗಳಿಂದ ಕಲಬೆರಕೆ ರಹಿತ ಪದಾರ್ಥಗಳಲ್ಲಿ ತೆಂಗೂ ಸಹ ಒಂದು. ಇಂದು ತೆಂಗಿನ ಉಪ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡಿದರೆ ಉತ್ತಮ ಲಾಭ ಗಳಿಸಬಹುದಾಗಿದೆ. ಈ ನಿಟ್ಟಿನಲ್ಲಿ ನಾವು ಈಗಾಗಲೇ ನಿಟ್ಟೂರು ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ವತಿಯಿಂದ ತೆಂಗಿನ ವರ್ಜಿನ್ ಎಣ್ಣೆ, ತೆಂಗಿನ ಚಿಪ್ಸ್, ತೆಂಗಿನ ಪೌಡರ್‌ಗಳನ್ನು 'ತರಳಾಮೃತ' ಬ್ರ್ಯಾಂಡ್ ನಲ್ಲಿ ಮಾರಾಟದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇದರಿಂದ ತೆಂಗಿನ ಬೆಳೆಯ ಸ್ಥಿರತೆ ಕಾಪಾಡುವಲ್ಲಿ ಸಹಕಾರಿಯಾಗುವುದೆಂದು ತಿಳಿಸಿದರು.

ವಿಜ್ಞಾನಿಗಳಾದ ರಘುರಾಜ ಜೆ., ಸಣ್ಣಗೌಡ್ರ ಹೆಚ್. ಎಂ., ಡಾ. ಅವಿನಾಶ ಟಿ.ಜಿ., ಜಿಲ್ಲೆಯ ವಿವಿಧ ಭಾಗಗಳಿಂದ ಆಯ್ಕೆಯಾದ 20 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಗ್ರಾಮ ವಾಸ್ತವ್ಯದಿಂದ ಜನರ ಮನೆ ಬಾಗಿಲಿಗೆ ಸೌಲಭ್ಯ

ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ

ಮಾಯಕೊಂಡ, ಜ.22- ಅಧಿಕಾರಿಗಳು ಗ್ರಾಮ ವಾಸ್ತವ್ಯದಲ್ಲಿ ಬರುವ ಸಮಸ್ಯೆಗಳನ್ನು ನಿರ್ಲಕ್ಷಿಸದೇ ಸ್ಪಂದಿಸಬೇಕು ಎಂದು ಶಾಸಕ ಪ್ರೊ.ಲಿಂಗಣ್ಣ ಕರೆ ನೀಡಿದರು.

ಇಲ್ಲಿಗೆ ಸಮೀಪದ ಗಂಗನಕಟ್ಟೆ ಗ್ರಾಮದಲ್ಲಿ ನಿನ್ನೆ ನಡೆದ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಧ್ಯವರ್ತಿಗಳ ಕಾಟ ತಪ್ಪಿಸಿ, ಜನರ ಮನೆ ಬಾಗಿಲಿಗೆ ಸೌಲಭ್ಯ ಒದಗಿಸಲು ಗ್ರಾಮ ವಾಸ್ತವ್ಯ ಕಾರ್ಯಕ್ರಮ ರೂಪಿಸಲಾಗಿದೆ. ಅಧಿಕಾರಿಗಳು ಜನರ ಅಹವಾಲುಗಳನ್ನು ನೆಪ ಮಾತ್ರಕ್ಕೆಸ್ವೀಕರಿಸಿ,ನಿರ್ಲಕ್ಷಿಸಬಾರದು.ಏನೋ ಬಂದು, ಹೋದರು ಎಂಬಂತಾಗದೇ ಜನಸಾಮಾನ್ಯರಿಗೆ ಸ್ಪಂದಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆ ಜನರಿಗೆ ತಲುಪಿಸಲು ಆಡಳಿತ ಯಂತ್ರ ಶ್ರಮಿಸಬೇಕು ಎಂದರು.

ತಹಶೀಲ್ದಾರ್ ಡಾ. ಅಶ್ವತ್ಥ್ ಮಾತನಾಡಿ, ಸರ್ಕಾರಿ ಕಚೇರಿಗಳಿಗೆ ನಾಗರಿಕರ ಅಲೆದಾಟ ತಪ್ಪಿಸಿ, ಸ್ಥಳೀಯ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಬಗೆಹರಿಸಿಕೊಳ್ಳಲು ಗ್ರಾಮ ವಾಸ್ತವ್ಯ ಸಹಕಾರಿಯಾಗಿದ್ದು, ಗ್ರಾಮಸ್ಥರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಸರ್ವೇ ಇಲಾಖೆ ವಿರುದ್ಧ ದೂರು : ದಿಶಾ ಸಮಿತಿ ಸದಸ್ಯ ಸಂಗಣ್ಣ, ಪ್ರತೀ ಸಾರಿಯೂ ಎಂಟತ್ತು ಸಾವಿರ ಹಣ ಎಲ್ಲಿಂದ ತರಬೇಕು? ಸರ್ಕಾರದಲ್ಲಿ ಈ ರೀತಿ ಲಂಚ ಕೇಳಿದರೆ ಬಡವರ ಗತಿ ಏನು? ಎಂದರು.

ದಾವಣಗೆರೆ ಜನತಾ ಬಜಾರ್ ಅಧ್ಯಕ್ಷ ಜಿ.ಡಿ. ಗುರುಸ್ವಾಮಿ ಮಾತನಾಡಿ, ಒಗ್ಗೂಡಿಸಿದ ಪಹಣಿಗಳನ್ನು ನಾಲ್ಕಾರು ವರ್ಷದಿಂದ ಪೋಡು ಮಾಡದೇ ಸತಾಯಿಸುತ್ತಿದ್ದಾರೆ ಎಂದು ಆರೋಪಿಸಿದರು.

ತಹಶೀಲ್ದಾರ್ ಅಶ್ವತ್ಥ್, ಪೋಡಿ ಮುಕ್ತ ಗ್ರಾಮ ಯೋಜನೆ ಇದೇ ಗ್ರಾಮದಿಂದ ಆರಂಭ ಮಾಡಬೇಕು. ಇನ್ನು ಮುಂದೆ ಸರ್ವೇಯರ್ ಅಳತೆ ಮಾಡಬೇಕಾಗಿಲ್ಲ. ಪಿಡಿಓ ಅವರೇ ದಿಶಾಂಕ್ ಆ್ಯಪ್ ಮೂಲಕ ಅಳತೆ ಮಾಡಬೇಕು. ಸ್ವಾಮಿತ್ವ ಕಾರ್ಡ್ ಬರಲಿದ್ದು, ಜಮೀನು ಮಾರಾಟ, ಖರೀದಿ ಇತ್ಯಾದಿಗೆ ಬಳಸಬಹುದು ಎಂದರು.

ಬೆಸ್ಕಾಂ ಎಇಇ ತೀರ್ಥೇಶ್, ಪಂಪ್‌ಸೆಟ್‌ಗಳಿಗೆ 7ತಾಸು ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ ಎಂದರು.

ಆಹಾರ ಶಿರಸ್ತೇದಾರ್ ಬುಡೇನ್ ಸಾಬ್, ಪಡಿತರ ಚೀಟಿಗೆ ಸದಸ್ಯರ ಹೆಸರನ್ನು ಆನ್‌ಲೈನ್‌ನಲ್ಲಿ ಸೇರಿಸಬೇಕು. ಪಡಿತರ ಅಕ್ಕಿಗೆ ಸಾರವರ್ಧಿತ ಅಕ್ಕಿ ಬೆರೆಸಿದೆ ಎಂದರು.

ಧನ್ಯಕುಮಾರ್ ಸ್ವಾಗತಿಸಿದರು. ಬಸವಾರಾಧ್ಯ ನಿರೂಪಿಸಿದರು. ಸಿದ್ದರಾಮೇಶ್ ವಂದಿಸಿದರು.

ಮದ್ಯ ಮಾರಾಟ, ಉಪ್ಪು ನೀರು ಪೂರೈಕೆ ತಡೆಯಿರಿ : ಗಂಗನಕಟ್ಟೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮದ್ಯ ಮಾರಾಟ ಮಾಡುತ್ತಾರೆ. ಇಸ್ಪೀಟ್ ಆಡುವವರ ಹಾವಳಿಯೂ ಹೆಚ್ಚಿದ್ದು, ಕುಟುಂಬಗಳು ಹಾಳಾಗಿವೆ. ಇದನ್ನು ಮೊದಲು ನಿಯಂತ್ರಿಸುವ ಕೆಲಸ ಮಾಡಿ ಎಂದು ಮಹಿಳೆಯರು ಶಾಸಕರಿಗೆ ಆಗ್ರಹಿಸಿದರು. ಶಾಸಕರು ಕೂಡಲೇ ಅಕ್ರಮ ಮದ್ಯ, ಜೂಜಾಟ ನಿಯಂತ್ರಿಸಬೇಕು ಎಂದು ಮಾಯಕೊಂಡ ಪಿಎಸ್‌ಐಗೆ ಸೂಚಿಸಿದರು.

ಕಿತ್ತೂರಿನಲ್ಲಿ ಇಂದು ಉಜ್ಜಯಿನಿ ಶ್ರೀ ಅಡ್ಡಪಲ್ಲಕ್ಕಿ ಮಹೋತ್ಸವ

ದಾವಣಗೆರೆ ತಾಲ್ಲೂಕಿನ ಕಿತ್ತೂರು ಗ್ರಾಮದ ಶ್ರೀ ಬಸವೇಶ್ವರ, ಶ್ರೀ ವಿನಾಯಕ, ಶ್ರೀ ಆಂಜನೇಯ ದೇವಸ್ಥಾನಗಳ ಕಳಸಾರೋಹಣದ ಪ್ರಯುಕ್ತ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಧಾರ್ಮಿಕ ಸಮಾರಂಭವು ಇಂದು ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಕಾರ್ಯದರ್ಶಿ ಕೆ.ಜಿ.ಕೆ. ಸ್ವಾಮಿ ತಿಳಿಸಿದ್ದಾರೆ.

ಇಂದು ಬೆಳಗಿನ ಜಾವ 3.30 ಕ್ಕೆ ಶ್ರೀ ಈಶ್ವರ, ಬಸವೇಶ್ವರ, ವಿನಾಯಕ ಮತ್ತು ಆಂಜನೇಯ ದೇವಸ್ಥಾನಗಳಲ್ಲಿ ಗಣ, ರುದ್ರ ಮತ್ತು ವಾಸ್ತು ಹೋಮ, ಬೆಳಿಗ್ಗೆ 7 ಕ್ಕೆ ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನೆರವೇರಲಿದೆ. ಮಧ್ಯಾಹ್ನ 1 ಕ್ಕೆ ಶ್ರೀ ಈಶ್ವರ, ಬಸವೇಶ್ವರ, ವಿನಾಯಕ ಮತ್ತು ಆಂಜನೇಯ ದೇವಸ್ಥಾನಗಳ ಕಳಸಾರೋಹಣ ಮತ್ತು ವಿಶೇಷ ಪೂಜೆ, ಜಗದ್ಗುರುಗಳ ಅಮೃತ ಹಸ್ತದಿಂದ ನಡೆಯಲಿದ್ದು, ಮಧ್ಯಾಹ್ನ 2 ಕ್ಕೆ ಪ್ರಸಾದ ವಿನಿಯೋಗ ಹಾಗೂ ಅನ್ನ ಸಂತರ್ಪಣೆ ನಂತರ ಮಧ್ಯಾಹ್ನ 2.30 ಕ್ಕೆ ಧರ್ಮಸಭೆ ನಡೆಯಲಿದೆ.

ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಸಾನ್ನಿಧ್ಯ ವಹಿಸುವರು. ರಾಮಘಟ್ಟದ ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ. ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಹೊಟ್ಯಾಪುರದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಮಾನಿಹಳ್ಳಿಯ ಡಾ. ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿಯವರಿಂದ ಉಪದೇಶಾಮೃತ ನಡೆಯಲಿದೆ.

ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ದೇವಸ್ಥಾನ ಸಮಿತಿ ಅಧ್ಯಕ್ಷ ಹೆಚ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಸಚಿವ ಭೈರತಿ ಬಸವರಾಜ್, ಸಂಸದ ಪ್ರತಾಪ ಸಿಂಹ, ತೇಜಸ್ವಿ ಸೂರ್ಯ ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಪ್ರೊ. ಎನ್. ಲಿಂಗಣ್ಣ, ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಎಸ್.ವಿ. ರಾಮಚಂದ್ರ, ಮಾಡಾಳು ವಿರೂಪಾಕ್ಷಪ್ಪ, ಎಸ್. ರಾಮಪ್ಪ, ಕೆ.ಎಸ್. ನವೀನ್ ಮತ್ತಿತರರು ಭಾಗವಹಿಸಲಿದ್ದಾರೆ.

ಹೊದಿಗೆರೆಯಲ್ಲಿ ಇಂದು ಶ್ರೀ ಷಹಾಜಿ ರಾಜೇ ಭೋಂಸ್ಲೆ ಪುಣ್ಯಾರಾಧನೆ

ಶ್ರೀ ಷಹಾಜಿ ರಾಜೇ ಭೋಂಸ್ಲೆ ಅವರ 359ನೇ ಪುಣ್ಯಾರಾಧನೆ ಕಾರ್ಯಕ್ರಮವು ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದ ಸ್ಮಾರಕ ಭವನದಲ್ಲಿ ಇಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಭಕ್ತಾದಿಗಳಿಗೆ ಭಾಗವಹಿಸಲು ಅನುಕೂಲವಾಗುವಂತೆ ದಾವಣಗೆರೆ ಯಿಂದ ಹೊದಿಗೆರೆಗೆ ಬಸ್ಸಿನ ವ್ಯವಸ್ಥೆ

ಮಾಡಲಾಗಿದೆ. ಭಾಗವಹಿಸಲಿಚ್ಛಿಸುವವರು ಇಂದು ಮುಂಜಾನೆ 6.45 ರಿಂದ 7.45ಕ್ಕೆ ಶ್ರೀ ವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್)ದಿಂದ ಬಸ್ ಹೊರಡಲಿದೆ. ಕ್ಷತ್ರಿಯ ಮರಾಠ ಸಮಾಜ ಬಾಂಧವರು ಈ ಕಾರ್ಯ ಕ್ರಮದಲ್ಲಿ ಪಾಲ್ಗೊಂಡು ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಕ್ಷತ್ರಿಯ ಮರಾಠ ಸಮಾಜದ ಅಧ್ಯಕ್ಷ ಡಿ. ಮಾಲತೇಶರಾವ್ ಜಾಧವ್, ಗೌರವಾಧ್ಯಕ್ಷ ಯಶವಂತರಾವ್ ಜಾಧವ್ ಕೋರಿದ್ದಾರೆ.

ಕೊಟ್ಟೂರು : ಸ್ವಾಮಿ ವಿವೇಕಾನಂದರ ಸ್ಫೂರ್ತಿ ಪುಸ್ತಕ ವಿತರಣೆ

ಕೊಟ್ಟೂರು, ಜ. 22 - ಪಟ್ಟಣದ ಸರ್ಕಾರಿ ಪಿ.ಯು ಕಾಲೇಜಿನಲ್ಲಿ ನೆಹರು ಯುವ ಕೇಂದ್ರ ಬಳ್ಳಾರಿ ಹಾಗೂ ಆಶಾ ಕಿರಣ ಮಹಿಳಾ ಅಭಿವೃದ್ಧಿ ಸಂಘದ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ವೀರೇಶ್ ಹಿರಿಲಿಂಗಪ್ಪನವರ್ ಮಾತನಾಡಿ, ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಸಹೋದರಿಯರೇ, ಸಹೋದರರೇ ಎಂದು ಹೇಳುವ ಮೂಲಕ ಪಾಶ್ಚಿಮಾತ್ಯರ ಕಣ್ಣನ್ನು ತೆರೆಸಿದ ವಿವೇಕಾನಂದರು, ಭಾರತದ ಕೀರ್ತಿ ಪತಾಕೆಯನ್ನು ವಿಶ್ವದ ಮುಂದೆ ಎತ್ತಿ ಹಿಡಿದರು ಎಂದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಸ್ಫೂರ್ತಿ ಪುಸ್ತಕ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ಸೋಮಶೇಖರ್ ಉಪನ್ಯಾಸಕ ಬಸವರಾಜ ಎಂ. ಮುನೇಗೌಡ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು ಡಿಎಸ್ಸೆಸ್ ಪ್ರತಿಭಟನೆ

ದಾವಣಗೆರೆ, ಜ.22- ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಘಟಕದಿಂದ ನಾಳೆ ದಿನಾಂಕ 23ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಏರ್ಪಡಿಸಲಾಗಿದೆ ಎಂದು ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ಬಿ. ದುಗ್ಗಪ್ಪ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಅಂಬೇಡ್ಕರ್ ವೃತ್ತ ದಿಂದ ಉಪ ವಿಭಾಗಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು. ಸಮಿತಿಯ ನಾಗಪ್ಪ ಮಂಜುನಾಥ, ಚಿಕ್ಕನಹಳ್ಳಿ ಬಿ. ಹನುಮಂತಪ್ಪ, ಈಚಘಟ್ಟ ಕೆಂಚಪ್ಪ, ಸಿದ್ದನೂರು ಕೆಂಚವೀರಪ್ಪ, ಕೊಡಗನೂರು ಲಕ್ಷ್ಮಣ ಸೇರಿದಂತೆ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

ತತ್ವ ಅಕಾಡೆಮಿ ವತಿಯಿಂದ ವಸ್ತು ಪ್ರದರ್ಶನ

ದಾವಣಗೆರೆ, ಜ. 22- ನಗರದ ತತ್ವ ಅಕಾಡೆಮಿ ವತಿಯಿಂದ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತು ಪ್ರದರ್ಶನ ಮತ್ತು ಕಸದಿಂದ ರಸ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕಿ ಆರ್. ವಾಗ್ದೇವಿ ಮತ್ತಿತರರು ಭಾಗವಹಿಸಿದ್ದರು.

ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ಕಂಠಿ ಬೀರೇಶ್ವರ ನಗರ, ವಿಶ್ವಬಂಧು ನಗರ, ಚನ್ನೇಶ್ವರ ನಗರ, ಕಮಲಾ ನಗರ, ಸಿದ್ಧಾರೂಢ ನಗರ, ಕೆ.ಎಚ್.ಬಿ ಫೇಸ್-1, ಮಾಗೋಡ ರಸ್ತೆ, ಕೆ.ಎಸ್.ಎಸ್.ಐ.ಡಿ.ಸಿ, ಎಸ್.ಟಿ.ಜೆ.ಐ.ಟಿ ಕಾಲೇಜ್, ಚಿದಂಬರ ನಗರ, ನೇಕಾರ ಕಾಲೋನಿ, ಕೆಎಚ್‌ಡಿಸಿ, ಶಾಂತಿನಗರ ಮತ್ತು ದಾನೇಶ್ವರ ನಗರ ಏರಿಯಾಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ಅಭಿವ್ಯಕ್ತಿಗೆ 'ಸ್ವಾತಂತ್ರ್ಯ' ಕೊಡಲು ಸಮಾಜ ಸಿದ್ಧವೇ...?

- ಎಸ್.ಎ. ಶ್ರೀನಿವಾಸ್

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಕುರಿತ ಪುಸ್ತಕವಾದ 'ಸಿದ್ದು ನಿಜ ಕನಸುಗಳು' ಬಿಡುಗಡೆ ಮಾಡದಂತೆ ಬೆಂಗಳೂರಿನ ನ್ಯಾಯಾಲಯ ಇತ್ತೀಚೆಗೆ ನಿರ್ಬಂಧಿಸಿದೆ. ಈ ಸುದ್ದಿ ನೋಡಿದಾಗ ನನ್ನ ಮಿತ್ರರೊಬ್ಬರು, ವ್ಯಕ್ತಿಗಳ ತೇಜೋವಧೆ ಮಾಡುವ ಪುಸ್ತಕ ಪ್ರಕಟಿಸಲು ಭಾರತದ ಕಾಯ್ದೆಯಲ್ಲಿ ಅವಕಾಶವಿದೆಯೇ? ಎಂಬುದು.

ಈ ಪ್ರಶ್ನೆ ಕೇಳಿದಾಗ ನನಗೆ ನೆನಪಿಗೆ ಬಂದಿದ್ದು ಕೆಲ ವರ್ಷಗಳ ಹಿಂದಿನ ದಲಿತ ಲೇಖಕ ಹಾಗೂ ವಿಚಾರವಾದಿ ಕಾಂಚ ಇಲಯ್ಯ ಅವರು ಬರೆದಿದ್ದ ಪುಸ್ತಕದ ಪ್ರಕರಣ. ಅವರು 'ಸಾಮಾಜಿಕ ಸ್ಮಗ್ಲರುಲು ಕೊಮಟೊಲ್ಲು' ಎಂಬ ಪುಸ್ತಕ ಬರೆದಿದ್ದರು. ಈ ಪುಸ್ತಕದ ಶೀರ್ಷಿಕೆಯ ಅರ್ಥ ಆರ್ಯ ವೈಶ್ಯ ಸಮುದಾಯದವರು ಸಾಮಾಜಿಕ ಕಳ್ಳಸಾಗಣೆದಾರರು ಎಂಬುದಾಗಿತ್ತು.

ಸಮುದಾಯವೊಂದನ್ನು ಆಧಾರ ರಹಿತವಾಗಿ ಅವಹೇಳನ ಮಾಡಲಾಗಿದೆ. ಈ ಪುಸ್ತಕ ನಿಷೇಧಿಸಬೇಕು ಎಂದು ಕೆಲವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ಕೋರ್ಟ್, ಪುಸ್ತಕ ನಿಷೇಧಿಸಲಾಗದು ಎಂದು ಹೇಳಿತ್ತು.

ಪ್ರತಿಯೊಬ್ಬ ಲೇಖಕ, ಇಲ್ಲವೇ ಬರಹಗಾರ ತನ್ನ ವಿಚಾರಗಳನ್ನು ಮುಕ್ತವಾಗಿ ಹೇಳುವ ಹಾಗೂ ಸಮರ್ಪಕವಾಗಿ ತಿಳಿಸುವ ಮೂಲಭೂತ ಹಕ್ಕು ಹೊಂದಿದ್ದಾನೆ. ಲೇಖಕ ಹಾಗೂ ಬರಹಗಾರರ ಅಭಿವ್ಯಕ್ತಿ ಸ್ವಾತಂತ್ರ್ಯ ಕಡಿತವನ್ನು ಎಂದೂ ಹಗುರವಾಗಿ ಪರಿಗಣಿಸಬಾರದು ಎಂದು ಕೋರ್ಟ್ ತಿಳಿಸಿತ್ತು.

ನಾವು ವಿವರಗಳನ್ನು ಉಲ್ಲೇಖಿಸಲು ಬಯಸುವುದಿಲ್ಲ. ಲೇಖಕರೊಬ್ಬರು ಪುಸ್ತಕ ಬರೆದಾಗ, ಅದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯ. ಪುಸ್ತಕ ನಿಷೇಧಿಸುವುದು ಸಂವಿಧಾನದ 32ನೇ ವಿಧಿಗೆ ಸೂಕ್ತವಲ್ಲ ಎಂದು ನ್ಯಾಯಾಲಯ ಹೇಳಿತ್ತು.

ಅಭಿವ್ಯಕ್ತಿ ಸ್ವಾತಂತ್ರ್ಯ ಮೊಟಕುಗೊಳಿಸಬಾರದೆಂಬ ಸುಪ್ರೀಂ ಕೋರ್ಟ್‌ನ ಈ ತೀರ್ಪು ನನ್ನ ಪ್ರಕಾರ ಅತ್ಯುನ್ನತ ಆದರ್ಶವಾಗಿದೆ. ಯಾವುದೇ ವ್ಯಕ್ತಿ ತನಗೆ ಇಷ್ಟವಾಗದ ಅಭಿಪ್ರಾಯ ಕೇಳಿದ ತಕ್ಷಣ ರೊಚ್ಚಿಗೇಳುವುದು, ಆಕ್ರೋಶಗೊಳ್ಳುವುದು ಆರೋಗ್ಯಕರ ಸಮಾಜದ ಲಕ್ಷಣವಲ್ಲ. ಆದರೆ, ಇದೇ ತೀರ್ಪು ಉಳಿದ ಎಲ್ಲ ಪ್ರಕರಣಗಳಿಗೂ ಅನ್ವಯವಾಗುವಂತಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ನನ್ನ ಭಾವನೆಗಳಿಗೆ ಧಕ್ಕೆಯಾಯಿತು ಎಂದು ಹೇಳಿಕೊಂಡು ಜನ ಪೊಲೀಸರಲ್ಲಿ ದೂರು ನೀಡುವ, ಇಲ್ಲವೇ ನ್ಯಾಯಾಲಯದ ಮೊರೆ ಹೋಗುವ ಪದ್ಧತಿಯಾದರೂ ತಪ್ಪುತ್ತಿತ್ತು. ದುರದೃಷ್ಟವಶಾತ್ ಆ ರೀತಿ ಆಗಲಿಲ್ಲ.

ಇತ್ತೀಚೆಗಷ್ಟೇ ನಡೆದ ನೂಪುರ್ ಶರ್ಮ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದ ಟಿಪ್ಪಣಿ ಆಸಕ್ತಿಕರವಾಗಿತ್ತು. ಶರ್ಮ ಅವರ ಮಾತುಗಳು ಇಡೀ ದೇಶದಲ್ಲಿ ಬೆಂಕಿ ಹತ್ತಿಕೊಳ್ಳಲು ಕಾರಣವಾಗಿದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಟಿಪ್ಪಣಿ ಮಾಡಿದ್ದರು.

ನಿಜ ಬೆಂಕಿ ಹತ್ತಿಕೊಂಡಿರಬಹುದು. ಆದರೆ, ಬೆಂಕಿ ಹತ್ತಿಕೊಳ್ಳಲು ಮೂರು ಅಂಶಗಳು ಬೇಕು ಎಂದು ವಿಜ್ಞಾನ ಹೇಳುತ್ತದೆ. ಇಂಧನ, ಆಕ್ಸಿಜನ್ ಹಾಗೂ ಶಾಖ. ಇವು ಮೂರು ಇದ್ದರಷ್ಟೇ ಬೆಂಕಿ ಕಾಣಿಸಿಕೊಳ್ಳುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಇರುವವರು ಆಡುವ ಮಾತುಗಳು, ಕೇಳಿಸಿಕೊಂಡವರು ಅರ್ಥ ಮಾಡಿಕೊಳ್ಳುವ ರೀತಿ ಹಾಗೂ ನಂತರ ಎಸಗುವ ಕೃತ್ಯಗಳು ಸೇರಿಕೊಂಡು ಬೆಂಕಿ ಹತ್ತಿಕೊಳ್ಳುತ್ತದೆ.

2017ರ ಕಾಂಚ ಇಲಯ್ಯ ಅವರ ಪ್ರಕರಣದಲ್ಲಿ ನೀಡಿದ ತೀರ್ಪಿನಲ್ಲಿ, ಅಭಿವ್ಯಕ್ತಿ ಸ್ವಾತಂತ್ರ್ಯ ಎತ್ತಿ ಹಿಡಿಯಲಾಗಿತ್ತು. ಇದು ಅತ್ಯಂತ ಮಹತ್ವದ್ದು. ಏಕೆಂದರೆ ವ್ಯಕ್ತಿಯೋರ್ವ ಆಡುವ ಯಾವ ಮಾತು ಬೆಂಕಿಗೆ ಕಾರಣವಾಗುತ್ತದೆ ಎಂಬುದನ್ನು ಯಾರೂ ಊಹಿಸಲಾರರು. ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದೇ ಕೆಲವರಿಗೆ ಆಕ್ರೋಶ ತರಬಹುದು. ಹಾಗೆಂದು ಅಭಿವ್ಯಕ್ತಿ ಸ್ವಾತಂತ್ರ್ಯ ಅಂತ್ಯಗೊಳಿಸಲಾದೀತೇ?

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರ ಕೆನ್ನೆಗೆ ಹಾಲಿವುಡ್ ನಟ ರಿಚರ್ಡ್ ಗೆರೆ ಅವರು 2007ರಲ್ಲಿ ವೇದಿಕೆಯ ಮೇಲೆ ಮುತ್ತಿಟ್ಟದ್ದನ್ನು ಆಕ್ಷೇಪಿಸಿ, ಮುಂಬೈ ನ್ಯಾಯಾಲಯದಲ್ಲಿ ಪ್ರಕರಣವೊಂದು ದಾಖಲಾಗಿತ್ತು. ಈ ಪ್ರಕರಣದಲ್ಲಿ ಹುರುಳಿಲ್ಲ ಎಂದು 15 ವರ್ಷಗಳ ನಂತರ ತೀರ್ಪು ಬಂದಿದೆ. ಮುತ್ತಿಟ್ಟವರು, ಮುತ್ತು ಕೊಡಿಸಿಕೊಂಡವರು ಇಬ್ಬರಿಗೂ ಸಮಸ್ಯೆ ಇಲ್ಲ. ದೇಶದ 140 ಕೋಟಿ ಜನರಲ್ಲಿ ಯಾರೋ ಕೆಲವರಿಗೆ ನೋವಾಯಿತಂತೆ. ಹೀಗಾಗಿ ಪ್ರಕರಣ ದಾಖಲಿಸಲಾಯಿತು.

140 ಕೋಟಿ ಜನರಲ್ಲಿ ಯಾರಿಗೆ ಯಾವ ವಿಷಯಕ್ಕೆ ಯಾವಾಗ ಯಾವ ರೀತಿ ನೋವಾಯಿತು? ಎಂಬುದನ್ನು ಯಾವ ರೀತಿ ಕಂಡುಕೊಳ್ಳಬೇಕು? ಒಂದೆಡೆ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಡುತ್ತಲೇ, ಮತ್ತೊಂದೆಡೆ ನನ್ನ ಭಾವನೆಗಳಿಗೆ ಧಕ್ಕೆಯಾಗಬಾರದು ಎಂಬ ಹಕ್ಕು ಕೊಡುವುದು ಎಷ್ಟರ ಮಟ್ಟಿಗೆ ಸರಿ? ಎರಡರಲ್ಲಿ ಒಂದು ಮಾತ್ರ ಇರಲು ಸಾಧ್ಯ.

ಅಭಿವ್ಯಕ್ತಿ ಹಾಗೂ ಭಾವನೆ ಇವುಗಳಲ್ಲಿ ಯಾವುದು ಬೇಕೆಂಬುದನ್ನು ದೇಶದ ಮಹಾಜನತೆ ನಿರ್ಧರಿಸುವುದರ ಮೇಲೆ ಸಂವಿಧಾನ ಕೊಟ್ಟಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಭವಿಷ್ಯ ನಿರ್ಧಾರವಾಗಲಿದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 75 ವರ್ಷಗಳಾಗಿರಬಹುದು. ಅಭಿವ್ಯಕ್ತಿಗೆ ಸ್ವಾತಂತ್ರ್ಯ ನೀಡುವಲ್ಲಿ ನಾವು ಇನ್ನೂ ಸಾಕಷ್ಟು ದೂರ ಸಾಗಬೇಕಿದೆ.

ದೇವನಾಯ್ಕನಹಳ್ಳಿಯಲ್ಲಿ ಇಂದು - ನಾಳೆ ದೇವಸ್ಥಾನದ ಗೃಹ ಪ್ರವೇಶ, ಕುಂಭಾಭಿಷೇಕ

ಹೊನ್ನಾಳಿ, ಜ. 22- ಪಟ್ಟಣದ ದೇವನಾಯ್ಕನಹಳ್ಳಿ ಶ್ರೀ ದುರ್ಗಮ್ಮ ದೇವಿ, ಮರಿಯಮ್ಮ ದೇವಿ ಹಾಗೂ ಗಾಳಿ ದುರ್ಗಮ್ಮ ದೇವಸ್ಥಾನದ ಗೃಹ ಪ್ರವೇಶ, ಮೂರ್ತಿಗಳ ಪ್ರತಿಷ್ಠಾಪನೆ, ಕಳಸಾರೋಹಣ, ಕುಂಭಾಭಿಷೇಕ ಕಾರ್ಯಕ್ರಮಗಳು ನಾಡಿದ್ದು ದಿನಾಂಕ 23 ಮತ್ತು 24ರ ಎರಡು ದಿನ ಅದ್ಧೂರಿಯಾಗಿ ಜರುಗಲಿದೆ ಎಂದು ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಸೇವಾ ಸಮಿತಿ ಹಾಗೂ ಕುರುಬ ಸಮಾಜದ ಹಿರಿಯ ಮುಖಂಡ ಹೆಚ್.ಬಿ. ಗಿಡ್ಡಪ್ಪ ಹಾಗೂ ತೆಂಗಿನಮರದ ಮಾದಪ್ಪ ಅವರು ಹೇಳಿದರು.

ಅವರು ದೇವನಾಯ್ಕನಹಳ್ಳಿಯಲ್ಲಿ ಸಮಾಜದ ಮುಖಂಡರೊಂದಿಗೆ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಡಿದ್ದು ದಿನಾಂಕ 23ರ ಬೆಳಿಗ್ಗೆ 7 ಗಂಟೆಗೆ ಶ್ರೀ ಸೂರ್ಯನಾರಾಯಣ ಶ್ರೀ ಮೂರುಝೂವೇಶ್ವರ ಮಠ ಬಹದ್ದೂರು ಘಟ್ಟ ಇವರ ಸಾನ್ನಿಧ್ಯದಲ್ಲಿ ಶ್ರೀ ಗಣಪತಿ ಪೂಜೆ, ಧ್ವಜಾರೋಹಣ, ವಾಸ್ತು ಪೂಜಾ ಮತ್ತು ಶ್ರೀ ದುರ್ಗಾ ಹೋಮ, ಶ್ರೀ ವಿಶ್ವಕರ್ಮ ಹೋಮ ದೇವಸ್ಥಾನಗಳ ಗೃಹ ಪ್ರವೇಶದ ಪೂರ್ವಭಾವಿಯಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ದಿನಾಂಕ 24ರಂದು ಶ್ರೀ ದುರ್ಗಮ್ಮದೇವಿ, ಶ್ರೀ ಮರಿಯಮ್ಮ ದೇವಿ ಹಾಗೂ ಶ್ರೀ ಗಾಳಿ ದುರ್ಗಮ್ಮ ದೇವಿ ದೇವಸ್ಥಾನದ ಗೃಹ ಪ್ರವೇಶ, ಮೂರ್ತಿಗಳ ಪ್ರತಿಷ್ಠಾಪನೆ, ಗೋಪುರ ಕಳಸಾರೋಹಣ ಮತ್ತು ಕುಂಭಾಭಿಷೇಕ ಕಾರ್ಯಕ್ರಮಗಳು ಜರುಗಲಿವೆ.

ನಂತರ 12 ಗಂಟೆಗೆ ಕನಕ ಗುರುಪೀಠ ಕಾಗಿನೆಲೆ ಮಹಾಸಂಸ್ಥಾನದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ವೇದಿಕೆ ಕಾರ್ಯಕ್ರಮ ಉದ್ಘಾಟನೆ ಹಾಗೂ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಜೊತೆಗೆ ಕನಕ ಗುರು ಪೀಠದ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಹಿರೇಕಲ್ಮಠದ ಡಾ.ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ನೂತನ ದೇವಸ್ಥಾನ ಗೃಹ ಪ್ರವೇಶ, ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ದೇವರ ಗಣಮಕ್ಕಳಾದ ಪ್ರಭಾಕರ್ ದ್ಯಾಮಜ್ಜಿ, ಅಣ್ಣಪ್ಪ ಗುಡ್ಡಜ್ಜಿ, ತೆಂಗಿನಮರದ ಮಾದಪ್ಪ ಗುಡ್ಡಜ್ಜಿ ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಎಂ.ಎಸ್. ಪಾಲಾಕ್ಷ, ಮಾದಪ್ಪ, ಬುದ್ದಿವಂತರ ನರಸಿಂಹಪ್ಪ, ವಿಜೇಂದ್ರಪ್ಪ, ಬಿಸಾಟಿ ನಾಗರಾಜ್, ಮಾರ್ಜೋಗಿ ನಾಗರಾಜಪ್ಪ ಉಪಸ್ಥಿತರಿದ್ದರು.

ಮಲೇಬೆನ್ನೂರಿನಲ್ಲಿ ಸಂಭ್ರಮದ ಅಂಬಿಗರ ಚೌಡಯ್ಯ ಜಯಂತಿ

ಮಲೇಬೆನ್ನೂರು, ಜ.22- ಇಲ್ಲಿನ ಪುರಸಭೆ ಮತ್ತು ನಾಡಕಚೇರಿಯಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ 903ನೇ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಪುರಸಭೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯ ಸಾಬೀರ್ ಅಲಿ, ಮಾಜಿ ಸದಸ್ಯ ಬಿ.ಸುರೇಶ್, ಯುಸೂಫ್, ಗಂಗಾಮತ ಸಮಾಜದ ಹಿರಿಯರಾದ ಕಣ್ಣಾಳ್ ಪರಶುರಾಮಪ್ಪ, ಕಣ್ಣಾಳ್ ಹನುಮಂತಪ್ಪ, ಕಣ್ಣಾಳ್ ಧರ್ಮಣ್ಣ, ಗಂಗಾಮತ ಸಮಾಜದ ಮಲೇಬೆನ್ನೂರು ಪಟ್ಟಣದ ಅಧ್ಯಕ್ಷ ಮಾಳಗಿಮನಿ ಮಂಜಣ್ಣ, ಗ್ರಾಮಾಂತರ ಅಧ್ಯಕ್ಷ ಅಡ್ಡಮನಿ ಧರ್ಮಣ್ಣ ಮಾತನಾಡಿ, ಸಮಸ್ತ ಮನುಕುಲಕ್ಕೆ ಉದ್ಧಾರದ ಮಾರ್ಗ ತೋರಿದ ಸಮಾಜ ಸುಧಾರಕ ನಿಜಶರಣ ಅಂಬಿಗರ ಚೌಡಯ್ಯನವರಾಗಿದ್ದಾರೆ ಎಂದು ಸ್ಮರಿಸಿದರು.

ಉಪತಹಶೀಲ್ದಾರ್ ಆರ್.ರವಿ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಶಬ್ಬೀರ್ ಖಾನ್, ಷಾ ಅಬ್ರಾರ್, ನಯಾಜ್, ಬಿ. ಮಂಜುನಾಥ್, ಟಿ.ಹನುಮಂತಪ್ಪ, ಪಿ.ಆರ್. ರಾಜು, ಎ.ಕೆ.ಲೋಕೇಶ್, ಚಮನ್ ಷಾ, ಕೆ.ಪಿ. ಗಂಗಾಧರ್, ಭೋವಿಕುಮಾರ್, ಬಿ.ಸುರೇಶ್, ಪುರಸಭೆ ಅಧಿಕಾರಿಗಳಾದ ಏಕನಾಥ್, ದಿನಕರ್, ಉಮೇಶ್, ನವೀನ್, ಹಾಲೇಶಪ್ಪ, ಪ್ರಭು, ಗ್ರಾಮಲೆಕ್ಕಾಧಿಕಾರಿಗಳಾದ ಅಣ್ಣಪ್ಪ, ಬೋರಯ್ಯ, ನಾಡಕಚೇರಿಯ ಪುಷ್ಪಾ ಹಿರೇಮಠ, ಶಿಲ್ಪಾ, ಮಾರುತಿ, ರಾಜಪ್ಪ, ಬಸವರಾಜ್, ಗಂಗಾಮತ ಸಮಾಜದ ಮುಖಂಡರಾದ ಗುಳದಹಳ್ಳಿ ಗದಿಗೆಪ್ಪ, ಗೌಡ್ರ ರಂಗನಾಥ್, ನಿಟ್ಟೂರು ರಾಮಚಂದ್ರಪ್ಪ, ಕಣ್ಣಾಳ್ ಶೇಖರಪ್ಪ, ಪೂಜಾರ್ ಚಿಕ್ಕಣ್ಣ, ಮಾಳಗಿಮನಿ ರಾಮಣ್ಣ, ಚಿಕ್ಕಬಿದರಿ ಪ್ರಭು, ದೊಡ್ಡ ಮಲ್ಲಜ್ಜರ ರಾಮಣ್ಣ, ಗೋವಿನಾಳ್ ಚಂದ್ರಪ್ಪ, ಕುಂಬಳೂರಿನ ಕರಡೆಪ್ಪರ ರಾಜಪ್ಪ, ಮಾಗಾನಹಳ್ಳಿ ವಾಸುದೇವಮೂರ್ತಿ, ಕರಡೆಪ್ಪರ ಗೌತಮ್, ಜಿಗಳಿಯ ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಜಾತ್ರೆ ಸ್ವಾಭಿಮಾನದ ಸಂಕೇತ

(1ನೇ ಪುಟದಿಂದ) ಈ ಬಾರಿ ನೂತನ ರಥ ಲೋಕಾರ್ಪಣೆಗೊಳ್ಳಲಿದ್ದು, ಉದ್ಘಾಟನೆಗೆ ರಾಷ್ಟ್ರಪತಿಗಳಿಗೆ ಆಹ್ವಾನ ನೀಡಲಾಗಿದೆ ಎಂದರು.

ಜಾತ್ರಾ ಸಮಿತಿ ಅಧ್ಯಕ್ಷರಾದ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಸ್ವಾಮೀಜಿಯವರ 246 ದಿನಗಳ ಹೋರಾಟದ ಫಲವಾಗಿ ಎಸ್ಸಿ-ಎಸ್ಟಿ ಜನರಿಗೆ ಮೀಸಲಾತಿ ಹೆಚ್ಚಳವಾಗಿದೆ. ಈ ಸಂತಸದಲ್ಲಿ ನಡೆಯುತ್ತಿರುವ ವಾಲ್ಮೀಕಿ ಜಾತ್ರಾ ಸಮಿತಿಗೆ ತನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ತನಗೆ ಖುಷಿ ತಂದಿದೆ ಎಂದರು.

ಜಾತ್ರಾ ಸಮಿತಿ ಸಂಚಾಲಕ ಹಾಗೂ ಕೆ.ಪಿ.ಸಿ.ಸಿ. ಎಸ್ಟಿ ಕಾಂಗ್ರೆಸ್ ಅಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ವಾಲ್ಮೀಕಿ ಜಾತ್ರೆ ಮೂಲಕ ಸಮಾಜದಲ್ಲಿ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಬಗ್ಗೆ ಅರಿವು ಮೂಡಿಸುತ್ತಿರುವ ಶ್ರೀಗಳ ಶ್ರಮ ಸಾರ್ಥಕವಾಗಿದೆ. ನಮ್ಮ ಸಮಾಜ ರಾಜ್ಯದಲ್ಲಿ ಗಮನ ಸೆಳೆಯುವ ನಿಟ್ಟಿನಲ್ಲಿ ಒಂದಾಗಿ ಮುನ್ನಡೆಯಲು ಈ ಜಾತ್ರೆ ಸಹಕಾರಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಎಸ್ಸಿ ವಿಶ್ರಾಂತ ಸದಸ್ಯ ಜಿ.ಟಿ ಚಂದ್ರಶೇಖರಪ್ಪ, ನಿವೃತ್ತ ಅಧಿಕಾರಿ ಹರ್ತಿಕೋಟೆ ವೀರೇಂದ್ರ ಸಿಂಹ, ಮುಖಂಡ ಹೊದಿಗೆರೆ ರಮೇಶ್, ಮಂಗೇನಹಳ್ಳಿ ಲೋಹಿತ್, ಕೆಪಿಟಿಸಿಎಲ್, ಎಇಇ ಕೆ.ಎಸ್ ಜಯಪ್ಪ ವಾಲ್ಮೀಕಿ ಸ್ಮರಣ ಸಂಪುಟ 5ರ ಸಂಪಾದಕ ಪ್ರೊ. ಕರಿಯಪ್ಪ ಮಾಳಗಿ, ಸಂಪುಟ-4ರ ಸಂಪಾದಕ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿದರು.

ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಧರ್ಮದರ್ಶಿ ಕೆ.ಬಿ. ಮಂಜುನಾಥ, ತಿಮ್ಮೇನಹಳ್ಳಿ ಚಂದ್ರಪ್ಪ, ರಾಜನಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಚೈತ್ರ ಲಂಕೇಶ್, ಹರಿಹರ ನಗರಸಭೆ ಸದಸ್ಯ ದಿನೇಶ್ ಬಾಬು, ಮಹಿಳಾ ಮುಖಂಡರಾದ ಶ್ರೀಮತಿ ವಿಜಯಶ್ರೀ ಮಹೇಂದ್ರಕುಮಾರ್, ಶ್ರೀಮತಿ ಪಾರ್ವತಿ ಬೋರಯ್ಯ, ಶ್ರೀಮತಿ ಗೌರಮ್ಮ ಮಂಜುನಾಥ್, ಪ್ರಾಧ್ಯಾಪಕರಾದ ಡಾ. ಪ್ರಹ್ಲಾದಪ್ಪ, ಡಾ. ತಿಪ್ಪೇಸ್ವಾಮಿ, ಶಿಕ್ಷಕ ವಾಸನ ಮಹಾಂತೇಶ್, ದಾವಣಗೆರೆಯ ತರುಣ್ ಇವೆಂಟ್ಸ್ ಮಾಲೀಕ ಹುಲ್ಮನಿ ಪ್ರಸಾದ್, ಹರಿಹರದ ಮಕರಿ ಪಾಲಾಕ್ಷಪ್ಪ, ಹಂಚಿನಮನಿ ದೇವೇಂದ್ರಪ್ಪ, ರಾಜು, ಕುಂಬಳೂರು ವಾಸು, ಪತ್ರಕರ್ತ ಜಿಗಳಿ ಪ್ರಕಾಶ್, ಗಂಗಾವತಿ ತಾಲ್ಲೂಕಿನ ಹನುಮಂತಪ್ಪ, ನಾರಾಯಣಪ್ಪ, ವೀರಭದ್ರಪ್ಪ ನಾಯಕ, ದುರುಗಪ್ಪ ದಳಪತಿ, ಬೆಂಗಳೂರಿನ ಪ್ರಭುಸ್ವಾಮಿ, ಎಂ. ಮಾಧು, ಜಗದೀಶ್, ಶಿವಮೂರ್ತಿ, ದೇವು, ಚಂದ್ರು ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ರಾಜ್ಯದಲ್ಲಿ ಶೇ.62 ಜನರು ನೇರವಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ

20ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ಡಾ.ಕೆ.ಪಿ.ಬಸವರಾಜಪ್ಪ

ದಾವಣಗೆರೆ, ಜ.22- ಕರ್ನಾಟಕದಲ್ಲಿ ಶೇಕಡ 62 ಜನರು ಕೃಷಿಯನ್ನು ನೇರವಾಗಿ ಜೀವನೋಪಾಯಕ್ಕೆ ಅವಲಂಬಿಸಿದ್ದು, ಭಾರತದಲ್ಲಿ ಶೇಕಡ 50ರಷ್ಟು ಜನ ಕೃಷಿಯನ್ನೇ ನಂಬಿದ್ದಾರೆ ಎಂದು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಹಾಗೂ ಕರ್ನಾಟಕ ಯೋಜನಾ ಆಯೋಗದ ಸದಸ್ಯರೂ ಆದ ಡಾ.ಕೆ.ಪಿ. ಬಸವರಾಜಪ್ಪ ಹೇಳಿದರು.

ಇಲ್ಲಿನ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ 20ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ ಜರುಗಿತು. ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ರೈತರ ಆದಾಯ ದ್ವಿಗುಣಗೊಳಿಸಲು ಪ್ರಮುಖ ಮೂರು ಅಂಶಗಳೆಂದರೆ ಸಮಗ್ರ ಕೃಷಿ, ಖರ್ಚು ಕಡಿಮೆ ಮಾಡುವುದು ಹಾಗೂ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಮಾಡುವುದು. ಎಲ್ಲಾ ಅಭಿವೃದ್ಧಿ ಇಲಾಖೆಗಳು ಹಾಗೂ ವಿಜ್ಞಾನ ಕೇಂದ್ರಗಳು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಬೆಂಗಳೂರು ಐಸಿಎಆರ್-ಅಟಾರಿ ವಿಜ್ಞಾನಿ ಡಾ.ಡಿ ಕೋಲೇಕರ್ ಮಾತನಾಡಿ, ಜಿಲ್ಲೆಯ ಕೃಷಿ ಆರ್ಥಿಕತೆಗೆ ಕೆವಿಕೆಯ ಕೊಡುಗೆ ಮಹತ್ವದ್ದಾಗಿದೆ, ತಂತ್ರ ಜ್ಞಾನಗಳ ಅಳವಡಿಕೆಯಿಂದ ರೈತರು ಸಾಕಾರಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಶಿವಮೊಗ್ಗ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯ ಸಹ ವಿಸ್ತರಣಾ ನಿರ್ದೇಶಕ ಡಾ. ಎಸ್.ವಿ. ಪಾಟೀಲ್ ಮಾತನಾಡಿ ಕೃಷಿ ವಿಜ್ಞಾನ ಕೇಂದ್ರವು ಚಿಕ್ಕ ಕೃಷಿ ಸಂಶೋಧನಾ ಕೇಂದ್ರವಾಗಿದ್ದು, ಮಣ್ಣು ಮತ್ತು ನೀರು ಸಂರಕ್ಷಣೆಗೆ ಆದ್ಯತೆ ಕೊಡಬೇಕೆಂದು ತಿಳಿಸಿದರು. ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ, ಭತ್ತದ ಬೆಳೆಯ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿರುವುದರಿಂದ ರೈತರಿಗೆ ಲಾಭದಾಯಕ ವಾಗುತ್ತಿಲ್ಲವೆಂದು ಕಳವಳ ವ್ಯಕ್ತಪಡಿಸಿದರು. ಸಭೆಯಲ್ಲಿ ಕೆವಿಕೆಯ ಮುಖ್ಯಸ್ಥರು ಹಾಗೂ ಹಿರಿಯ ವಿಜ್ಞಾನಿ ದೇವರಾಜ ಟಿ. ಎನ್. ಅವರು ಕಳೆದ ಒಂದು ವರ್ಷದ ಪ್ರಗತಿಯನ್ನು ಮಂಡಿಸಿದರು.

ಸಭೆಯಲ್ಲಿ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ಎಚ್. ಕೆ. ವೀರಣ್ಣ, ಹಾಗೂ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೆವಿಕೆಯ ವಿಜ್ಞಾನಿಗಳು ಭಾಗವಹಿಸಿದ್ದರು.

ಹರಿಹರ : ಯೋಗಿ ವೇಮನ ಜಯಂತ್ಯೋತ್ಸವ

ಹರಿಹರ, ಜ.22- ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಮಹಾನ್ ಯೋಗಿ ವೇಮನ ಜಯಂತ್ಯೋತ್ಸವ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ತಹಶೀಲ್ದಾರ್ ಎಂ.ಬಿ. ಅಶ್ವತ್ಥ್, ಜಿಪಂ ಮಾಜಿ ಅಧ್ಯಕ್ಷ ಎ. ಗೋವಿಂದ ರಡ್ಡಿ, ಮಂಜುನಾಥ ರಡ್ಡಿ, ಅಧ್ಯಕ್ಷರು ರಡ್ಡಿ ಸಂಘ, ಹನುಮಂತ ರಡ್ಡಿ ಎಪಿಎಂಸಿ ಮಾಜಿ ಅಧ್ಯಕ್ಷ ದ್ಯಾವಪ್ಪ ರಡ್ಡಿ, ಕಾಡಾ ಅಧ್ಯಕ್ಷರು, ಹನುಮಂತ ರಡ್ಡಿ ಗ್ರಾ.ಪಂ ಮಾಜಿ ಅಧ್ಯಕ್ಷರು, ವಿಷ್ಣು ರಡ್ಡಿ ಕಾರ್ಯದರ್ಶಿ ವೇಮನ ಮಠ, ಕೊಟ್ರೇಶ ರಡ್ಡಿ ಬಸಪ್ಪ ರಡ್ಡಿ ಎಂ. ವೆಂಕಟೇಶ ರಡ್ಡಿ ಬಸಪ್ಪ ರಡ್ಡಿ ಟಿ. ತಿಪ್ಪೇಸ್ವಾಮಿ ಹನುಮಂತ ರಡ್ಡಿ, ಸುಧಾಕರ್, ಶಶಿಧರ್ ನಾಮದೇವ ರಡ್ಡಿ, ಶ್ರೀನಿವಾಸ ರಡ್ಡಿ, ಪತಿಯಪ್ಪ ರೆಡ್ಡಿ, ರಂಗಪ್ಪ ರೆಡ್ಡಿ, ಭಾಸ್ಕರ ರೆಡ್ಡಿ, ಮಲ್ಲಿಕಾರ್ಜುನ ರೆಡ್ಡಿ, ಪಕ್ಕೀರಡ್ಡಿ, ನಿಂಗಪ್ಪ ರಡ್ಡಿ ಸುರೇಶಬಾಬು, ರಾಜು ರಡ್ಡಿ, ಶಿವರಡ್ಡಿ ಹಾಗೂ ರಡ್ಡಿ ಸಮಾಜದವರು ಹಾಜರಿದ್ದರು.

ಕುಂಬಳೂರಿನಲ್ಲಿ ಅಂಬಿಗರ ಚೌಡಯ್ಯ ಜಯಂತಿ

ಮಲೇಬೆನ್ನೂರು, ಜ.22- ಕುಂಬಳೂರು ಗ್ರಾಮದ ಶ್ರೀ ಗಂಗಾ ಪರಮೇಶ್ವರಿ ದೇವಸ್ಥಾನದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಶನಿವಾರ ಸಂಭ್ರಮದಿಂದ ಆಚರಿಸಲಾಯಿತು. ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್.ಹೆಚ್.ಬಸವರಾಜಪ್ಪ, ಮುಖಂಡರಾದ ಕರಡೆಪ್ಪರ ರಾಜಪ್ಪ, ಎಂ.ಹೆಚ್.ಪರಮೇಶ್ವರಪ್ಪ, ಕಡೇಮನಿ ಪುಟ್ಟಪ್ಪ, ಶಿಕ್ಷಕ ತಿಪ್ಪೇಶ್, ಕೆ.ಬಸವರಾಜ್, ಬಲ್ಲೂರು ರುದ್ರಪ್ಪ, ಬೆನ್ನೂರು ಕರಿಬಸಪ್ಪ, ಡಿ.ಕುಬೇರಪ್ಪ, ಎಂ.ಚಂದ್ರಪ್ಪ, ಜಯ್ಯಪ್ಪ, ಗಾಂಧಿ ರಾಮಪ್ಪ, ಮೋಹನ್, ವಿಜಯಕುಮಾರ್, ಬಾರ್ಕಿ ಚಂದ್ರಪ್ಪ, ಬಾತಿ ಲಕ್ಷ್ಮಣ, ಕೆ. ಆರ್.ರಮೇಶ್, ಡಿ.ಎಂ.ಶಿವು, ಬಿ.ಆಂಜನೇಯ, ಮಾರುತಿ, ಹನುಮೇಶ್ ಮತ್ತಿತರರು ಭಾಗವಹಿಸಿದ್ದರು.

ಅನ್ನ ಸಂತರ್ಪಣೆ : ಗ್ರಾಮದ ನಿಟ್ಟೂರು ವೃತ್ತದಲ್ಲಿ ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಡಾ.ಶಿವಕುಮಾರ ಮಹಾಸ್ವಾಮೀಜಿಯವರ 4ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಅಂಗಡಿ ಕೆ.ಹೊಳೆಬಸಪ್ಪ, ಎಂ.ಹೆಚ್. ರಮೇಶ್, ನಾಗೋಳ್ ಬಾಬು, ಮಡಿವಾಳರ ಸಂದೀಪ್ ಮತ್ತಿತರರು ಸೇರಿ ಅನ್ನ ಸಂತರ್ಪಣೆ ಹಮ್ಮಿಕೊಂಡಿದ್ದರು.

ಸುಪ್ರೀಂನಿಂದ ಸಂವಿಧಾನ 'ಹೈಜಾಕ್'

(1ನೇ ಪುಟದಿಂದ) ಸಂಸತ್ತಿಗೆ ಇದೆ ಎಂದು ನ್ಯಾಯಮೂರ್ತಿ ಸೋಧಿ ಹೇಳಿದ್ದರು.

ಸಂವಿಧಾನದ ಅಂಶಗಳನ್ನು ಹಾಗೂ ಜನಾದೇಶವನ್ನು ಕಡೆಗಣಿಸುವವರು ಮಾತ್ರ ತಾವು ಸಂವಿಧಾನಕ್ಕಿಂತ ಮೇಲಿ ನವರು ಎಂದುಕೊಳ್ಳುತ್ತಾರೆ ಎಂದೂ ಕಾನೂನು ಸಚಿವರು ಹೇಳಿದ್ದಾರೆ.

ಜನರು ತಮ್ಮ ಪ್ರತಿನಿಧಿಗಳ ಮೂಲಕ ತಾವೇ ಆಡಳಿತ ನಡೆಸುತ್ತಾರೆ. ಚುನಾಯಿತ ಜನಪ್ರತಿನಿಧಿಗಳು ಜನರ ಹಿತವನ್ನು ಪ್ರತಿನಿಧಿಸುತ್ತಾರೆ ಹಾಗೂ ಕಾನೂನು ರೂಪಿಸುತ್ತಾರೆ. ನಮ್ಮ ನ್ಯಾಯಾಂಗ ಸ್ವತಂತ್ರವಾಗಿದೆ ಹಾಗೂ ಸಂವಿಧಾನ ಸರ್ವೋಚ್ಚವಾಗಿದೆ ಎಂದು ರಿಜಿಜು ಹೇಳಿದ್ದಾರೆ.

ನ್ಯಾಯಾಂಗಕ್ಕೆ ಕಾನೂನುಗಳನ್ನು ರೂಪಿಸುವ ಹಕ್ಕಿಲ್ಲ. ಕಾನೂನು ರೂಪಿಸುವ ಹಕ್ಕು ಸಂಸತ್ತಿಗೆ ಸೇರಿದ್ದು ಎಂದು ನ್ಯಾಯಮೂರ್ತಿ ಸೋಧಿ ಹೇಳಿದ್ದರು.

ಸಂಸತ್ತು ಮಾತ್ರ ಸಂವಿಧಾನವನ್ನು ತಿದ್ದುಪಡಿ ಮಾಡಬಲ್ಲದು. ಆದರೆ, ಸುಪ್ರೀಂ ಕೋರ್ಟ್ ಮೊದಲ ಬಾರಿ ಸಂವಿಧಾನವನ್ನು ಹೈಜಾಕ್ ಮಾಡಿದೆ. ಸಂವಿಧಾನವನ್ನು ಹೈಜಾಕ್ ಮಾಡಿದ ನಂತರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನು ತಾನೇ ನೇಮಕ ಮಾಡುತ್ತಿದೆ ಎಂದು ನ್ಯಾಯಮೂರ್ತಿ ಸೋಧಿ ತಿಳಿಸಿದ್ದರು. ಕೊಲೀಜಿಯಂ ಮೂಲಕ ನ್ಯಾಯ ಮೂರ್ತಿಗಳೇ ನ್ಯಾಯಮೂರ್ತಿಗಳನ್ನು ನೇಮಿಸುವ ಪದ್ಧತಿಯು ಸಂವಿಧಾನಕ್ಕೆ ಪರಕೀಯವಾಗಿದೆ ಎಂದು ರಿಜಿಜು ಈ ಹಿಂದೆ ಹೇಳಿದ್ದರು.

ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದ ಎನ್.ಜೆ.ಎ.ಸಿ. ಕಾಯ್ದೆಯನ್ನು ತಳ್ಳಿ ಹಾಕುವ ಸುಪ್ರೀಂ ಕೋರ್ಟ್ ಕ್ರಮವನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಪ್ರಶ್ನಿಸಿದ್ದರು. ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕವನ್ನು ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಆಕ್ಷೇಪಿಸಿತ್ತು.

ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಎರಡನೇ ಬಾರಿ ಸುಪ್ರೀಂ ಕೋರ್ಟ್ ಪುನರುಚ್ಚರಿಸಿದ ನಂತರ ಸರ್ಕಾರ ಆ ಪ್ರಸ್ತಾಪಗಳನ್ನು ವಾಪಸ್ ಕಳಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಕೊಲೀಜಿಯಂ ಕಳೆದ ವಾರ ಹೇಳಿತ್ತು.

ಅಮೃತ ವಿದ್ಯಾಲಯಂನಲ್ಲಿ ಸಂಕ್ರಾಂತಿ ಆಚರಣೆ

ದಾವಣಗೆರೆ, ಜ. 22- ನಗರದ ಅಮೃತ ವಿದ್ಯಾಲಯಂ ಶಾಲೆಯಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಮಕ್ಕಳಿಗೆ ವೇಷಭೂಷಣ ಧರಿಸಿ ಹಬ್ಬವನ್ನು ಆಚರಿಸಲಾಯಿತು. ಬೇಬಿ ಉನ್ನತಿ ಎ.ಆರ್. ಕೂಡ ಇದ್ದರು.

ಭದ್ರಾವತಿ ಕಾರ್ಖಾನೆ ಮುಚ್ಚದಂತೆ ಒತ್ತಾಯ

(1ನೇ ಪುಟದಿಂದ) ವ್ಯೂಹಾತ್ಮಕವಲ್ಲದ ಸರ್ಕಾರಿ ಘಟಕಗಳ ಖಾಸಗೀಕರಣಕ್ಕೆ ಕೇಂದ್ರ ಸರ್ಕಾರ ನಿರ್ಧರಿಸಿದೆ. ಖಾಸಗೀಕರಣ ಸಾಧ್ಯವಾಗದೇ ಇರುವ ಕಂಪನಿಗಳನ್ನು ಮುಚ್ಚಲಾಗುತ್ತಿದೆ. ಅದರಂತೆ ಭಾರತೀಯ ಉಕ್ಕು ಪ್ರಾಧಿಕಾರ (ಎಸ್.ಎ.ಐ.ಎಲ್.) ವ್ಯಾಪ್ತಿಯಲ್ಲಿ ಬರುವ ವಿ.ಎಸ್.ಐ.ಎಲ್. ಮುಚ್ಚಲಾಗುತ್ತಿದೆ ಎಂದು ಗೌಡರು ಹೇಳಿದ್ದಾರೆ.

ಭಾರತರತ್ನ ಸರ್ ಎಂ. ವಿಶ್ವೇಶ್ವರಾಯ ಅವರು ದೂರದೃಷ್ಟಿಯಿಂದ ವಿ.ಐ.ಎಸ್.ಎಲ್. ಸ್ಥಾಪಿಸಿದ್ದರು. 1996ರಲ್ಲಿ ನಾನು ಪ್ರಧಾನಿಯಾಗಿದ್ದಾಗ ಈ ಕಂಪನಿಯನ್ನು ಎಸ್.ಎ.ಐ.ಎಲ್.ನಲ್ಲಿ ವಿಲೀನ ಮಾಡಲಾಗಿತ್ತು ಎಂದವರು ನೆನಪಿಸಿದ್ದಾರೆ.

650 ಕೋಟಿ ರೂ.ಗಳ ಹೂಡಿಕೆಯ ಮೂಲಕ ವಿ.ಐ.ಎಸ್.ಎಲ್. ಉನ್ನತೀಕರಣ ಈ ವಿಲೀನದ ಉದ್ದೇಶವಾಗಿತ್ತು. ದುರಾದೃಷ್ಟವಶಾತ್ ಉನ್ನತೀಕರಣವಾಗಿಲ್ಲ ಎಂದು ಗೌಡರು ಹೇಳಿದ್ದಾರೆ.

2000ದ ನಂತರ ವಿ.ಐ.ಎಸ್.ಎಲ್. ಕಂಪನಿಯು ಬಂಡವಾಳ ಹಿಂತೆಗೆತ, ಖಾಸಗೀಕರಣ, ಜಂಟಿ ಸಹಭಾಗಿತ್ವ ಸೇರಿದಂತೆ ಹಲವಾರು ಸವಾಲುಗಳನ್ನು ಎದುರಿಸಿದೆ. ಆದರೆ, ಇವು ಫಲ ನೀಡಿಲ್ಲ. ಇದು ಈ ವಲಯದ ದುಡಿಯುವ ವರ್ಗ ಹಾಗೂ ನಾಗರಿಕರ ಸ್ಥೈರ್ಯದ ಮೇಲೆ ಪರಿಣಾಮ ಬೀರಿದೆ ಎಂದೂ ಅವರು ತಿಳಿಸಿದ್ದಾರೆ.

ಈ ಘಟಕದ ಮೂಲಕ ಶಸ್ತ್ರಾಸ್ತ್ರ ಕಾರ್ಖಾನೆ, ಅಣು ಸಂಕೀರ್ಣ, ರೈಲ್ವೆ ಮುಂತಾದ ವಲಯಗಳಿಗೆ ಅಗತ್ಯವಾದ ಉನ್ನತ ಗುಣಮಟ್ಟದ ಉಕ್ಕು ತಯಾರಿಸಬಹುದು ಎಂದೂ ಗೌಡರು ಹೇಳಿದ್ದಾರೆ.

ಬಳ್ಳಾರಿ ಜಿಲ್ಲೆಯ ರಾಮದುರ್ಗದಲ್ಲಿ ವಿ.ಐ.ಎಸ್. ಎಲ್. ಗಣಿಗಾರಿಕೆಗಾಗಿ ರಾಜ್ಯ ಸರ್ಕಾರ 150 ಎಕರೆ ಜಮೀನು ನೀಡಿದೆ. ಈ ಪ್ರಸ್ತಾವನೆ ಉನ್ನತ ಹಂತದಲ್ಲಿದೆ. 2024ರಲ್ಲಿ ಗಣಿಗಾರಿಕೆ ಆರಂಭವಾಗಬಹುದು ಎಂದೂ ಅವರು ಹೇಳಿದ್ದಾರೆ.

ಸಿರಿವಂತ ಯಾನ್ ಆಸ್ತಿ ಮೌಲ್ಯ ಶೇ.93 ಕುಸಿತ

(1ನೇ ಪುಟದಿಂದ) ಎವರ್‌ಗ್ರಾಂಡೆ ಸಾಕಷ್ಟು ಸಮಸ್ಯೆಗಳಿಗೆ ಸಿಲುಕಿದೆ. ಈ ಕಂಪನಿ ಉಳಿಸಲು ಯಾನ್ ತಮ್ಮ ಮನೆಗಳು ಹಾಗೂ ಖಾಸಗಿ ವಿಮಾನಗಳನ್ನು ಮಾರಿದ್ದಾರೆ.

ಕಂಪನಿ ಸುಮಾರು 2 ಲಕ್ಷ ಉದ್ಯೋಗಿಗಳನ್ನು ಹೊಂದಿದೆ. 2020ರಲ್ಲಿ ಕಂಪನಿ 100 ಶತಕೋಟಿ ಡಾಲರ್‌ಗಳಿಗೂ ಹೆಚ್ಚಿನ ವಹಿವಾಟು ಕಂಡಿತ್ತು. 280 ನಗರಗಳಲ್ಲಿ 1,300 ನಿರ್ಮಾಣ ಕಾರ್ಯಗಳನ್ನು ಕಂಪನಿ ನಿರ್ವಹಿಸುತ್ತಿದೆ.

ಆದರೆ, ಕಳೆದ ವರ್ಷ ಕಂಪನಿ ಮರು ನಿರ್ಮಾಣ ಯೋಜನೆ ರೂಪಿಸುವಲ್ಲಿ ವೈಫಲ್ಯ ಕಂಡಿತ್ತು. ಇದು ಕಂಪನಿಯ ಭವಿಷ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟು ಹಾಕಿದೆ ಎಂದು ಸಿ.ಎನ್.ಎನ್. ಸುದ್ದಿ ಸಂಸ್ಥೆ ತಿಳಿಸಿದೆ.

ಈ ನಡುವೆ, ಉದ್ಯಮಿ ಹುಯ್ ಕಾ ಯಾನ್ ಅವರು ರಾಜಕೀಯವಾಗಿಯೂ ಏಕಾಂಗಿಯಾಗುತ್ತಿದ್ದಾರೆ. ಕಳೆದ ವರ್ಷ ನಡೆದ ಚೀನಾದ ಪೀಪಲ್ಸ್ ಪೊಲಿಟಿಕಲ್ ಕನ್ಸಲ್ಟೇಟಿವ್ ಕಾನ್ಫರೆನ್ಸ್ ಸಮಾವೇಶದಲ್ಲಿ ಯಾನ್ ಪಾಲ್ಗೊಳ್ಳಬಾರದು ಎಂದು ತಿಳಿಸಲಾಗಿತ್ತು. ಇದು ಚೀನಾದ ಪ್ರಭಾವಿ ಉದ್ಯಮಿಗಳ ಕೂಟವಾಗಿದೆ.

ಚೀನಾದ ರಿಯಲ್ ಎಸ್ಟೇಟ್ ಉದ್ಯಮ 2022ರಲ್ಲಿ ಕುಸಿತ ಕಂಡಿದೆ. ರಿಯಲ್ ಎಸ್ಟೇಟ್ ಬೆಲೆ ಇಳಿಕೆಯಾಗುತ್ತಿದೆ ಹಾಗೂ ವ್ಯಾಪಕ ಉದ್ಯೋಗ ನಷ್ಟವಾಗುತ್ತಿದೆ. 2023ರಲ್ಲೂ ಪರಿಸ್ಥಿತಿ ಹೆಚ್ಚು ಸುಧಾರಿಸುವ ಲಕ್ಷಣಗಳು ಕಂಡು ಬರುತ್ತಿಲ್ಲ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಹೊಸ ಮನೆಗಳ ಮಾರಾಟ ಶೇ.28ರಷ್ಟು ಕುಸಿತ ಕಂಡಿದೆ ಎಂದು ವರದಿಗಳು ತಿಳಿಸಿವೆ.

ದಶಕದ ನಂತರ ಇದೇ ಮೊದಲ ಬಾರಿಗೆ ರಿಯಲ್ ಎಸ್ಟೇಟ್ ವಲಯದ ಬೇಡಿಕೆ ಈ ಮಟ್ಟಕ್ಕೆ ಕುಂಠಿತವಾಗಿದೆ. ಕಟ್ಟಡ ನಿರ್ಮಾಣದಲ್ಲಿ ವಿಳಂಬ, ರಿಯಲ್ ಎಸ್ಟೇಟ್ ಕಂಪನಿಗಳ ಹೆಚ್ಚುತ್ತಿರುವ ಸಾಲ ಬಾಕಿ ಹಾಗೂ ಕೊರೊನಾ ಲಾಕ್‌ಡೌನ್‌ಗಳಿಂದ ಜನ ಮನೆಗಳ ಬಗ್ಗೆ ಹೊಂದಿರುವ ಆಕರ್ಷಣೆ ಕಡಿಮೆಯಾಗಿದೆ.

ದೇಶದ 70 ಪ್ರಮುಖ ನಗರಗಳಲ್ಲಿ ಮನೆಗಳ ಬೆಲೆಗಳು ಇಳಿಯುತ್ತಿವೆ ಎಂದು ಚೀನಾ ಸರ್ಕಾರದ ಪ್ರಕಟಣೆ ತಿಳಿಸಿದೆ.

ಗುರುವಾಯೂರು ದೇವಾಲಯದಲ್ಲಿ 260 ಕೆಜಿ ಬಂಗಾರ

(1ನೇ ಪುಟದಿಂದ) ಬಂಗಾರದ ಮಾಹಿತಿ ನೀಡಲು ದೇವಾಲಯ ಈ ಹಿಂದೆ ನಿರಾಕರಿಸಿತ್ತು. ಆದರೆ, ಈಗ ಮಾಹಿತಿ ಬಹಿರಂಗ ಪಡಿಸಲಾಗಿದೆ. ಇದರ ಪ್ರಕಾರ ದೇವಾಲಯ 6,605 ಕೆಜಿ ಬೆಳ್ಳಿ ಹಾಗೂ 5,359 ಬೆಳ್ಳಿ ಪದಕಗಳನ್ನು ಹೊಂದಿದೆ.

ಈ ಬಂಗಾರ ಹಾಗೂ ಬೆಳ್ಳಿಯ ಆಭರಣಗಳು ಪ್ರಾಚೀನವಾಗಿರುವ ಕಾರಣ ಅವುಗಳ ಮೌಲ್ಯ ಅಂದಾಜಿಸಲಾಗದು ಎಂದು ತಿಳಿಸಲಾಗಿದೆ.

ಸೈಟ್ ಮಾರಾಟಕ್ಕೆ
ಕರ್ನಾಟಕ ಗೃಹ ಮಂಡಳಿ
55x78 ಉತ್ತರ - ಪೂರ್ವ ಕಾರ್ನರ್, 60x80 ಪೂರ್ವ, 40x60 ಪೂರ್ವ, 40x60 ವೆಸ್ಟ್ 40x60 ಉತ್ತರ, 30x40 ಪೂರ್ವ, 30x50 ವೆಸ್ಟ್, 20x30 ಪೂರ್ವ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409

ಸೈಟು ಬೇಕಾಗಿರುತ್ತದೆ
ತರಳಬಾಳು ಬಡಾವಣೆ, ವಿದ್ಯಾನಗರ, ವಿನಾಯಕ ಬಡಾವಣೆ, ಉತ್ತರ ಅಥವಾ ಪೂರ್ವ ದಿಕ್ಕಿನ 30x50, 40x60 ಅಳತೆಯ ಸೈಟು ಬೇಕಾಗಿರುತ್ತದೆ. ಸಂಪರ್ಕಿಸಿ.
94482 32901, 94492 66296

ಬಿಲ್ಡಿಂಗ್ ಬಾಡಿಗೆಗೆ ಇದೆ
ಪಿ.ಜೆ. ಬಡಾವಣೆ 4ನೇ ಮುಖ್ಯರಸ್ತೆಯಲ್ಲಿ 2000 ಚ. ಅಡಿ ವಿಸ್ತೀರ್ಣದ 1ನೇ ಮಹಡಿ ಬಿಲ್ಡಿಂಗ್ (3 BHK) ಮನೆ ಮತ್ತು ವಾಣಿಜ್ಯ ಉದ್ದೇಶಕ್ಕೆ (ಸಸ್ಯಹಾರಿಗಳಿಗೆ ಮಾತ್ರ) ಬಾಡಿಗೆಗೆ ದೊರೆಯುತ್ತದೆ.
ಮೊ : 98441 88191

ಸೈಟ್ ಮಾರಾಟಕ್ಕಿದೆ
ಶಾಮನೂರಿನ ಪೋದಾರ್ ಹೈಸ್ಕೂಲ್ ಹತ್ತಿರ 20x30 ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ.
95918 29780, 80731 78139

ಬೇಕಾಗಿದ್ದಾರೆ
ಪಿಯುಸಿ ಆಗಿರುವ ಹುಡುಗರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166
ಆಕರ್ಷಕ ವೇತನ ನೀಡಲಾಗುವುದು.

EC / ಇಸಿ, E-swathu & Khatha Change
Call :
96118-66449

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಕುಕ್ ಕಮ್ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 15000/- ಊಟ ರೂಂ ಉಚಿತ. 12 ಗಂಟೆ ಕೆಲಸ ಸಂಪರ್ಕಿಸಿ.
97400 98064, 97400 98047

ಮಾರಾಟಕ್ಕಿದೆ
ಎಲ್ಲಾ ವಸ್ತುಗಳು ಇರುವ ಬೇಕರಿ (ಫುಲ್ ಫರ್ನಿಷ್ಡ್ ಬೇಕರಿ ಮಾರಾಟಕ್ಕಿದೆ) ಎಂಸಿಸಿ ಬಿ ಬ್ಲಾಕ್, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ದಾವಣಗೆರೆ.
99452 98381, 98808 08159

ಶ್ರೀ ವೀರಭದ್ರೇಶ್ವರ ಟ್ರೇಡರ್ಸ್
ಸ್ಟೀಲ್, ಸಿಮೆಂಟ್, ಪಿ-ಸ್ಯಾಂಡ್, ಎಂ-ಸ್ಯಾಂಡ್, 20MM ಜಲ್ಲಿ, ಹೊಳೆ ಮರಳು, ಲೈಟ್ ವೇಟ್ ಮೋಲ್ಡ್ ಬ್ರಿಕ್ಸ್, ಸಿಸಿ ಮೋಲ್ಡ್, ಸೋಲಾರ್ ವಾಟರ್ ಹೀಟರ್ ದೊರೆಯುತ್ತವೆ.
95387 71714, 77607 71714

Wanted
Boys required for data entry and billing work at
Food Mart Supermarket.
Quli : B.Com
Mob : 98864 63531

JUST ONE WEEK CAMP
Free Admission For P.E Teacher, Directors, B.Ed, M.Ed, Students, Directors, Sports Instructors (Etc)
Coaching For Roll Ball Game Played On Skating Lear Skating Earn Extra Income
COACH : PRITHVI KANTH N.KOTGI
M: 99649 53137

TO-LET ROOM
Office Purpose at 2nd main, P.J. Extension, by the side of Vinayaka medicals, Davangere.
98440 20566
81474 90008

ಶೋರೂಂಗೆ ಬೇಕಾಗಿದ್ದಾರೆ
Shanti Electric Vehicles
Double Decor Furniture
Female - ಮಹಿಳೆಯರು
Computer Office - 02 No.s.
Showroom Sales - 01 No.s
Male - ಪುರುಷರು
Showroom Sales - 02, Mechanics - 02
BSNL Circle, Davangere.
92432 19553

WANTED
Sales Manager for marketing of cattel feed.
Contact :
77606 77444

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷ ವಯಸ್ಸಿನ ಪುರುಷರು ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

ಸೈಟುಗಳು ಮಾರಾಟಕ್ಕಿವೆ
40x60 ಪೂರ್ವ 30x50 ಪಶ್ಚಿಮ (ಶಿವ ಪಾರ್ವತಿ ಲೇಔಟ್) 40x60 ಉತ್ತರ, 44x38 ಪೂರ್ವ-ಉತ್ತರ ಕಾರ್ನರ್, (ವಿನಾಯಕ ಬಡಾವಣೆ) 30x50 ಉತ್ತರ (ವಿವೇಕಾನಂದ ಬಡಾವಣೆ) 30x50 ಪೂರ್ವ (ಬನಶಂಕರಿ ಬಡಾವಣೆ)
95385 65909

ಹುಡುಗರು ಬೇಕಾಗಿದ್ದಾರೆ
ಫರ್ನಿಚರ್ ಅಂಗಡಿಯಲ್ಲಿ ಕಾರ್ಯನಿರ್ವಹಿಸಲು
ಕಬ್ಬೂರ್ ಫರ್ನಿಚರ್
ಸುಲ್ತಾನ್ ಡೈಮಂಡ್ ಶೊ ರೂಮ್ ಪಕ್ಕ, ಪಿ.ಬಿ. ರಸ್ತೆ ದಾವಣಗೆರೆ.
98444 26300

ಬೇಕಾಗಿದ್ದಾರೆ
ಅಕೌಂಟೆಂಟ್, ಕಂಪ್ಯೂಟರ್ ಆಪರೇಟರ್, ಅಸಿಸ್ಟೆಂಟ್ ಹುದ್ದೆಗೆ ಲೇಡೀಸ್ ಬೇಕಾಗಿದ್ದಾರೆ.
91108 98377

ಬೇಕಾಗಿದ್ದಾರೆ
ದಾವಣಗೆರೆ ಸುತ್ತ-ಮುತ್ತಲು ಕೆಲಸ ಮಾಡಲು ಸೆಕ್ಯುರಿಟಿ, ರೂಂ ಬಾಯ್, ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ ಮತ್ತು ಮಾಸೂರಿನಲ್ಲಿ ಕೆಲಸ ಮಾಡಲು ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಕೆಲವು ಕಡೆ ಊಟ ಮತ್ತು ವಸತಿ ವ್ಯವಸ್ಥೆಯಿರುತ್ತದೆ. ಕೂಡಲೇ ಸಂಪರ್ಕಿಸಿ.
74113 07071, 63624 79957
82177 93007

ಮನೆ ಮಾರಾಟಕ್ಕಿದೆ
ಎಸ್.ಪಿ.ಎಸ್ ನಗರದ 1ನೇ ಹಂತದಲ್ಲಿ ಬೂದಾಳ್ ರಸ್ತೆಗೆ ಹತ್ತಿರದಲ್ಲಿ ಇ-ಖಾತೆ ಹೊಂದಿರುವ ನಲ್ಲಿ, ಡ್ರೈನೇಜ್ ಸಂಪರ್ಕವಿರುವ 20x30 ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
94806 36501

ಬೇಕಾಗಿದ್ದಾರೆ
ಸೇಲ್ಸ್ ಎಕ್ಸಿಕ್ಯೂಟಿವ್ (ಬಾಯ್ಸ್, ಗರ್ಲ್ಸ್) ಮತ್ತು Tally ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿರಿ :
ನಯನ ಮೋಟಾರ್ಸ್, ದಾವಣಗೆರೆ.
ಫೋ. : 97312 90327

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಕಮರ್ಷಿಯಲ್ ಸೈಟು ಮಾರಾಟಕ್ಕಿದೆ
ನಗರದ B. I. E. T. ಕಾಲೇಜು ರಸ್ತೆಗೆ ಹಾಗೂ ಬಾಪೂಜಿ ಬ್ಯಾಂಕ್ ಎದುರುಗಡೆ ಇರುವ Shopping Complex ಮಾಡಬಹುದಾದ Corner Site ಮಾರಾಟಕ್ಕಿದೆ. ಆಸಕ್ತಿ ಇರುವವರು ನೇರವಾಗಿ ಸಂಪರ್ಕಿಸಿ.
ಮೊ.: 97424 34049

ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ
ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್
ಡೋ.ನಂ. 1212, ರಿಂಗ್ ರೋಡ್ ಹತ್ತಿರ, ಶಾರದಾಂಬ ದೇವಸ್ಥಾನ ವೃತ್ತ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
86608 55868
98449 76176

ಬೇಕಾಗಿದ್ದಾರೆ
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ 11,000 ರೂ.
ಫೋ. : 99161 43003

WANTED
SALES MAN FOR COLGATE PALMOLIVE
CONTACT
98860 97065

ಬೇಕಾಗಿದ್ದಾರೆ
1) ಟ್ಯಾಲಿ ಆಪರೇಟರ್ - 2 ಅನುಭವವಿರುವವರು,
2) ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್- 5,
3) ಕ್ಯಾಷಿಯರ್ -2 ಅನುಭವವುಳ್ಳವರು.
ಸಂಪರ್ಕಿಸಿ:
ದ್ವಾರಕಾ ಟ್ರೇಡರ್ಸ್
ಎಂ.ಜಿ.ರೋಡ್, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
ಮೊ: 86187 18554

ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
10 AM to 7 PM
99642 34370

ಅಡುಗೆ ಮಾಡುವವರು ಬೇಕಾಗಿದ್ದಾರೆ
ಶಿವಕುಮಾರಸ್ವಾಮಿ ಬಡಾವಣೆ 2ನೇ ಹಂತ ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ ಡೋರ್ ನಂ. 967 ಮನೆಯಲ್ಲಿ ಅಡುಗೆ ಕೆಲಸ ಮಾಡಲು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ. (ಸಸ್ಯಹಾರಿಗಳಿಗೆ ಮಾತ್ರ)
98867 93388, 83109 49604

ಅಣಿಗೆರೆ ಕಟ್ಟೆ ಜ್ಯೋತಿಷ್ಯ ಫಲಂ
ಶ್ರೀ ಚೌಡೇಶ್ವರಿ ದೇವಿ ಮತ್ತು ಭೂತರಾಯನ ಪ್ರಯೋಗದದಿಂದ ಪೂಜೆ ಸಲ್ಲಿಸಲಾಗುತ್ತದೆ.
ಪ॥ ಎ.ಕೆ.ರಾವ್
ವಿ.ಸೂ.ಸ್ತ್ರೀ-ಪುರುಷ ವಶೀಕರಣ. ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ.
99644 84508

WANTED
Telecallers are required for the reputed School in Davangere.
Qualification : any Degree
Contact :
96207 68987
94483 91963

ಬೇಕಾಗಿದ್ದಾರೆ
ಚನ್ನಗಿರಿ ಹಾಗೂ ಚನ್ನಗಿರ ತಾಲ್ಲೂಕಿನ ಸುತ್ತ-ಮುತ್ತ ಊರುಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. 8 ತಾಸು ಕೆಲಸ ESI ಮತ್ತು EPF ಹಾಗೂ ಇತರೆ ಸರ್ಕಾರಿ ಸೌಲ್ಯಭಗಳೊಂದಿಗೆ 10,000 ದಿಂದ 15000 ರೂ.ಗಳವರೆಗೆ ವೇತನ ಇರುತ್ತದೆ. ಸಂಪರ್ಕಿಸಿ.
98440 53261, 99867 21420

ನೀರಿನ ಲೀಕೇಜ್
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ 100% ಗ್ಯಾರಂಟಿ.

KHB ಸೈಟುಗಳು ಮಾರಾಟಕ್ಕೆ
ಕರ್ನಾಟಕ ಹೌಸಿಂಗ್ ಬೋರ್ಡ್ (ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ 30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು ಫಲಾನುಭವಿಗಳಿಂದ ನೇರ ಮಾರಾಟ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಫೋ. : 63605 67975

ಸೆಕ್ಯೂರಿಟಿ ಗಾರ್ಡ್ಸ್, ಹೌಸ್‌ಕೀಪಿಂಗ್‌ಗೆ ಬೇಕಾಗಿದ್ದಾರೆ
ಆಕರ್ಷಕ ಸಂಬಳದೊಂದಿಗೆ ESI+PF ಸೌಲಭ್ಯವಿರುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ.
70227 92613, 98448 18900

ಕಳಪೆ ಕಾಮಗಾರಿಯಾದ್ರೆ ಸಹಿಸಲ್ಲ : ಪಾಲಿಕೆ ಆಯುಕ್ತೆ ರೇಣುಕಾ ಸೂಚನೆ

ದಾವಣಗೆರೆ, ಜ. 22 - ಕಳಪೆ ಕಾಮಗಾರಿ ನಡೆಸಿದರೆ ಯಾವುದೇ ಕಾರಣಕ್ಕೂ ಸಹಿಸಲು ಆಗುವುದಿಲ್ಲ. ಗುಣಮಟ್ಟದ ಕಾಮಗಾರಿ ಆಗಬೇಕು. ಜನರಿಂದ ದೂರು ಬಾರದ ರೀತಿಯಲ್ಲಿ ಕೆಲಸ ಮಾಡುವಂತೆ ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ ಅವರು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಹಾನಗರ ಪಾಲಿಕೆಯ 38ನೇ ವಾರ್ಡ್ ಎಂಸಿಸಿ ಬಿ ಬ್ಲಾಕ್ ನ ಮೂರನೇ ಮುಖ್ಯ ರಸ್ತೆಯ ಎರಡನೇ ತಿರುವಿನಲ್ಲಿ ಕಾಂಕ್ರಿಟ್ ರಸ್ತೆ ಕಾಮಗಾರಿಯನ್ನು ವೀಕ್ಷಿಸಿದ ವೇಳೆ ಮಾತನಾಡಿದ ಅವರು, ಗುತ್ತಿಗೆದಾರರು ಕಾಮಗಾರಿ ಕುರಿತಂತೆ ಗುಣಮಟ್ಟ ಕಾಪಾಡಿಕೊಳ್ಳಬೇಕು. ಜನರು ಮೆಚ್ಚುಗೆ ವ್ಯಕ್ತಪಡಿಸುವ ರೀತಿಯಲ್ಲಿ ಕೆಲಸ ಆಗಬೇಕು ಎಂದು ಹೇಳಿದರು.

ಆಯುಕ್ತರ ಜೊತೆ ಕಾಮಗಾರಿ ವೀಕ್ಷಿಸಿದ ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ವಾರ್ಡ್ ನಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ. ಈಗ ನಡೆಯುತ್ತಿರುವ ಕಾಂಕ್ರೀಟ್ ಕಾಮಗಾರಿ ವೀಕ್ಷಿಸಲು ಆಯುಕ್ತರು ಆಗಮಿಸಿದ್ದು ಖುಷಿ ತಂದಿದೆ. ಗುತ್ತಿಗೆದಾರರಿಗೆ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸುವಂತೆ ಸೂಚಿಸಲಾಗಿದೆ ಎಂದರು.

ಕಾಂಕ್ರೀಟ್ ರಸ್ತೆ ಆಗಬೇಕೆಂಬ ಜನರ ಬೇಡಿಕೆ ಈಡೇರಿಸಿದ್ದೇವೆ. ಮನೆ ಬಾಗಿಲಿಗೆ ಹೋಗಿ ಜನರ ಸೇವಕನಂತೆ ಅಭಿವೃದ್ಧಿ ಕಾರ್ಯ ನಡೆಸಲಾಗುತ್ತಿದೆ. ವಾರ್ಡ್ ನ ಜನರು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಇದು ಸಂತಸ ತಂದಿದೆ ಎಂದು ತಿಳಿಸಿದರು.

ಈ ವೇಳೆ ಇಇ ಮನೋಹರ್, ಗುತ್ತಿಗೆದಾರ ಹನುಮಂತ ನಾಯ್ಕ್, ಎಂಸಿಸಿ ಬಿ ಬ್ಲಾಕ್ ನ ಹಿರಿಯರು, ಸ್ಥಳೀಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ಕಣ್ಮನ ಸೆಳೆದ ಶರಣ ಸಂಸ್ಕೃತಿ ಬಿಂಬಿಸುವ ನೃತ್ಯ ರೂಪಕಗಳು

ಬಿಜೆಎಂ ಶಾಲೆಯಲ್ಲಿ 'ಅರಿವಿನ ಉತ್ಸವ'ದ ಸಂಭ್ರಮ

ದಾವಣಗೆರೆ, ಜ. 22- ಜಾನಪದ, ಭಾವಗೀತೆ, ವಚನ ಗೀತೆಗಳಿಂದ ಸಂಗಮಗೊಂಡ ಕಾರ್ಯಕ್ರಮದಲ್ಲಿ ಶರಣ ಸಂಸ್ಕೃತಿಯನ್ನು ಬಿಂಬಿಸುವ ನೃತ್ಯರೂಪಕಗಳು ನೋಡುಗರ ಕಣ್ಮನ ಸೆಳೆದವು.

ನಗರದ ಬಿಜೆಎಂ ಸ್ಕೂಲ್ ಮತ್ತು ಜಿ.ಎನ್.ಬಿ. ಆಂಗ್ಲ ಮಾಧ್ಯಮ ಪ್ರೌಢಶಾಲೆ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 'ಅರಿವಿನ ಉತ್ಸವ'ದಲ್ಲಿ ಪೋಷಕರು ತಮ್ಮ ಮಕ್ಕಳು ಸಡಗರ, ಸಂಭ್ರಮದಿಂದ ಮಾಡಿದ ನೃತ್ಯಗಳನ್ನು ಕಣ್ತುಂಬಿಕೊಂಡರು.

ಇದೇ ಶಾಲೆಯಲ್ಲಿ ಸತತ ಪರಿಶ್ರಮದ ಅಧ್ಯಯನ ಮಾಡಿ, ಇದೀಗ ಪ್ರತಿಷ್ಠಿತ ಕಂಪನಿಯಲ್ಲಿ ಉದ್ಯೋಗ ಮತ್ತು ವೈದ್ಯಕೀಯ, ಇಂಜಿನಿಯರಿಂಗ್ ವಿದ್ಯಾಭ್ಯಾಸದಲ್ಲಿ ತೊಡಗಿರುವ ವಿದ್ಯಾರ್ಥಿಗಳನ್ನು ಗೌರವಿಸಿದ್ದು ಇತರರಿಗೆ ಪ್ರೇರಣೆ ನೀಡುವಂತಿತ್ತು.

ಒಬ್ಬರು ಕನ್ನಡ ಮಾಧ್ಯಮದಲ್ಲೇ ಓದಿ, ಪಶುವೈದ್ಯರಾಗಿ ಕರ್ತವ್ಯ ಆರಂಭಿಸಿ, ನಂತರ ಯುಪಿಎಸ್ಸಿ ಪರೀಕ್ಷೆಯಲ್ಲಿ ಕರ್ನಾಟಕಕ್ಕೆ ಮೊದಲ ಹಾಗೂ ಭಾರತಕ್ಕೆ 22 ನೇ ರ್‍ಯಾಂಕ್ ಗಳಿಸಿ ಇದೀಗ ಶಿರಸಿ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಡಾ.ಜಿ. ಆರ್. ಅಜ್ಜಯ್ಯ ಹಾಗೂ ರಾಜಕೀಯದಲ್ಲಿ ಚುನಾಯಿತ ಪ್ರತಿನಿಧಿಯಾಗಿ ಆಯ್ಕೆಯಾಗುವ ಸಂಭವವಿದ್ದರೂ, ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ 434 ನೇ ರ್‍ಯಾಂಕ್ ಗಳಿಸಿ ಇದೀಗ ಚೆನ್ನೈನಲ್ಲಿ ಜಾರಿ ನಿರ್ದೇಶನಾಲಯದ ಉಪ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿರುವ ಮಲ್ಲಿಕಾರ್ಜುನ್ ಆರ್. ಮಾಮನಿ ಅವರುಗಳನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾತನಾಡಿ, ಮಕ್ಕಳಿಗೆ ಶಿಕ್ಷಣ ಕೊಡುವುದು ಕೇವಲ ಶಿಕ್ಷಕರ ಜವಾಬ್ದಾರಿಯಲ್ಲ, ಪೋಷಕರು ಮನೆಯಲ್ಲಿ ಮಕ್ಕಳ ಓದಿನ ಬಗ್ಗೆ ಹೆಚ್ಚು ನಿಗಾ ವಹಿಸುವ ಅಗತ್ಯವಿದೆ. ಅವರಿಗೆ ಓದಿಗೆ ಬೇಕಾದ ಪೂರಕ ವಾತಾವರಣ ಕಲ್ಪಿಸುವ ಜೊತೆಗೆ ಸಹಕಾರ ನೀಡಬೇಕೆಂದು ಕರೆ ನೀಡಿದರು.

ಬಡವರು, ಮಾಧ್ಯಮ ವರ್ಗದವರ ಮಕ್ಕಳೇ ಹೆಚ್ಚಾಗಿ ಶಿಕ್ಷಣ ಪಡೆಯುತ್ತಿರುವ ಬಿಜೆಎಂ ಶಾಲೆ ಅತ್ಯಂತ ಕಡಿಮೆ ಶುಲ್ಕದಲ್ಲಿ ಮೌಲ್ಯಯುತ ಶಿಕ್ಷಣ ನೀಡುತ್ತಿದ್ದು, ಈ ಶಾಲೆ ಇತರೆ ಶಾಲೆಗಳಿಗಿಂತ ವಿಭಿನ್ನವಾಗಿದೆ. ಈ ಶಾಲೆಯಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ ಮತ್ತು ಉನ್ನತ ಹುದ್ದೆಗಳಿಗೆ ಆಯ್ಕೆಯಾಗಿರುವುದು ಸಂತೋಷದ ವಿಚಾರ ಎಂದರು.

ಇದೇ ಸಂದರ್ಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಪವನ್ ಗೌಳಿ, ಬಿ.ಎಂ. ಪೂಜಾ, ಎನ್. ಶಶಾಂಕ್, ರಶ್ಮಿ ಅವರಿಗೆ 'ಸಾಧನಾ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅರಣ್ಯ ಉಪ ಸಂರಕ್ಷಣಾಧಿಕಾರಿ ಡಾ.ಜಿ. ಆರ್. ಅಜ್ಜಯ್ಯ ಹಾಗೂ ಜಾರಿ ನಿರ್ದೇಶನಾಲಯದ ಉಪ ಆಯುಕ್ತ ಮಲ್ಲಿಕಾರ್ಜುನ ಆರ್. ಮಾಮನಿ ಅವರಿಗೆ 'ಸಂಗಮಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಂಸ್ಥೆಯ ಗೌರವ ಕಾರ್ಯದರ್ಶಿ ಮಂಜುನಾಥ್ ಅಗಡಿ, ನಿವೃತ್ತ ಸರ್ಕಾರಿ ಅಭಿಯೋಜಕ ಎಸ್.ವಿ. ಪಾಟೀಲ್ ಉಪಸ್ಥಿತರಿದ್ದರು.

'ಉಡಾನ್ - 03' ವಸ್ತು ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ

ದಾವಣಗೆರೆ, ಜ.22- ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್ ಹಾಗೂ ಜಿಟೋ ಲೇಡಿಸ್ ವಿಂಗ್ ವತಿಯಿಂದ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಶನಿವಾರ 'ಉಡಾನ್ - 03' ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ ಆಯೋಜಿಸಲಾಗಿತ್ತು. ಚೇತನಾ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷೆ ವಿ. ವಿಜಯಲಕ್ಷ್ಮಿ ಹಾಗೂ ಲತಾ ಲೋಕಿಕೆರೆ ನಾಗರಾಜ್ ಮೇಳಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ನೆರೆಯ ಶ್ರೀಲಂಕಾ, ಪಾಕಿಸ್ತಾನ ಮುಂತಾದ ದೇಶಗಳು ಆರ್ಥಿಕ ಸಂಕಷ್ಟದಲ್ಲಿರುವುದನ್ನು ಕಾಣುತ್ತಿದ್ದೇವೆ. ಎಲ್ಲರೂ ಸ್ವಾವಲಂಬಿಗಳಾಗಿ ಜೀವನ ನಡೆಸಿದರೆ ಆರ್ಥಿಕ ಸಂಕಷ್ಟಗಳಿಂದ ದೂರ ಇರಲು ಸಾಧ್ಯ ಎಂದು ಹೇಳಿದರು.

ಮಹಿಳೆಯರು ಮನೆಗಳಲ್ಲಿ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡಬಹುದು. ಇಂತಹ ಉದ್ಯಮಗಳು ಹೆಚ್ಚಾದರೆ, ದೇಶದಲ್ಲಿ ಎಂತಹ ಆರ್ಥಿಕ ಕುಸಿತ ಉಂಟಾದರು ನಿಭಾಯಿಸುವ ಶಕ್ತಿ ದೊರೆಯುತ್ತದೆ ಎಂದು ಹೇಳಿದರು.

ಮೇಳದಲ್ಲಿ ವಿವಿಧ ಉತ್ಪನ್ನಗಳ 52 ಮಾರಾಟ ಮಳಿಗೆಗಳು, 17 ಆಹಾರೋ ತ್ಪನ್ನ ಮಳಿಗೆಗಳು ಸೇರಿದಂತೆ ಕ್ರೀಡಾ ಮಳಿಗೆಗಳೂ ಇವೆ. ಮಹಿಳೆಯರಲ್ಲಿ ಉದ್ಯಮಶೀಲತೆ ಹೆಚ್ಚಿಸುವ ಸಲುವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಟೋ ದಾವಣಗೆರೆ ಮಹಿಳಾ ವಿಭಾಗದ ಮುಖ್ಯ ಕಾರ್ಯದರ್ಶಿ ಶ್ವೇತಾ ಗಾಂಧಿ ಮಾಹಿತಿ ನೀಡಿದರು.

ಮೇಳದಲ್ಲಿ ಆಹಾರ ಮಳಿಗೆ ತೆರೆದಿದ್ದ ಸ್ವೀಟ್ ಟೆಂಪ್ಟೇಷನ್‌ನ ಪೂರ್ವ ಜಿ. ಲೋಡಯ, ಮಹಿಳೆಯರ ಉದ್ಯೋಗ ಪ್ರೋತ್ಸಾಹಿಸಲು ಇದು ಉತ್ತಮ ವೇದಿಕೆಯಾಗಿದೆ ಎಂದರು.

ಜಿಟೋ ಉಪಾಧ್ಯಕ್ಷೆ ಬಿಂದು ಖೋನಾ, ಜೀಟೋ ಚಾಪ್ಟರ್ ಮುಖ್ಯ ಕಾರ್ಯದರ್ಶಿ ವಿಕ್ರಂ ಸೇಠಿಯಾ, ಯುವ ವಿಭಾಗದ ಅಧ್ಯಕ್ಷ ಸಯ್ಯಾಮ್ ಜೈನ್, ವಿರಾಕ್ ಜೈನ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಹಿಳೆಯರಿಗೆ ಸಂಗೀತ ಸ್ಪರ್ಧೆ

ದಾವಣಗೆರೆ, ಜ. 22- ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದ ಆಶ್ರಯದಲ್ಲಿ ಇದೇ ದಿನಾಂಕ 29 ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರದಾಸರ ಆರಾಧನೆಯ ಅಂಗವಾಗಿ 18 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಸಂಗೀತ ಸ್ಪರ್ಧೆಯನ್ನು ನಗರದ ವರ್ತುಲ ರಸ್ತೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

ಶ್ರೀ ತ್ಯಾಗರಾಜರ ಕೀರ್ತನೆಗೆ ಏಳು ನಿಮಿಷ, ಶ್ರೀ ಪುರಂದರ ದಾಸರ ದೇವರ ನಾಮಕ್ಕೆ ಐದು ನಿಮಿಷ ಕಾಲಾವಕಾಶ ನೀಡಲಾಗಿದೆ. ಶೃತಿ ಹೊರತುಪಡಿಸಿ ಬೇರೆ ಯಾವುದಕ್ಕೂ ಅವಕಾಶವಿಲ್ಲ.

ಹೆಸರು ನೋಂದಾಯಿಸಲು ಇದೇ ದಿನಾಂಕ 27 ಕೊನೆಯ ದಿನವಾಗಿರುತ್ತದೆ. ಮಾಹಿತಿಗಾಗಿ 988605 8866,9964027146 ಈ ಮೊಬೈಲ್ ಗಳಿಗೆ ಸಂಪರ್ಕಿಸುವಂತೆ ಶ್ರೀಮತಿ ಅಡಿಗ ಕೋರಿದ್ದಾರೆ.

ಸತತ ಪರಿಶ್ರಮ ಸಾಧಕರ ಸಾಧನೆಯ ಗುಟ್ಟು : ಎಸ್.ಆರ್. ಸಿರಗುಂಬಿ

ದಾವಣಗೆರೆ, ಜ. 22- ಮೊಬೈಲ್ ಬಿಟ್ಟು ಏಕಾಗ್ರತೆಯಿಂದ ಓದಿದರೆ ಮಾತ್ರ ಯಶಸ್ಸು ಗಳಿಸಲು ಸಾಧ್ಯ. ಸತತ ಪರಿಶ್ರಮ ಸಾಧಕರ ಸಾಧನೆಯ ಗುಟ್ಟು. ಅದನ್ನು ಬಲವಾಗಿ ನಂಬಿದಾಗ ಜೀವನದಲ್ಲಿ ಗಳಿಸಲು ಸಾಧ್ಯ ಎಂದು ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ದಾವಣಗೆರೆ ವಲಯದ ಪ್ರಾದೇಶಿಕ ಅಧಿಕಾರಿ ಎಸ್.ಆರ್. ಸಿರಗುಂಬಿ ಹೇಳಿದರು.

ದಾವಣಗೆರೆ ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮದಲ್ಲಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಹಮ್ಮಿಕೊಂಡಿದ್ದ ಕ್ರೀಡಾ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಾತ್ಮಗಾಂಧೀಜಿ, ಅಬ್ದುಲ್ ಕಲಾಂ, ಅಂಬೇಡ್ಕರ್ ಮೊದಲಾದ ಸಾಧಕರ ಬದುಕಿನ ಘಟನೆಗಳನ್ನು ಉದಾಹರಣೆಯಾಗಿ ನೀಡಿ, ವಿದ್ಯಾರ್ಥಿಗಳು ಬೆಳೆಸಿಕೊಳ್ಳ ಬೇಕಾದ ಆದರ್ಶಗಳನ್ನು ತಿಳಿಸಿದರು.

ಶೈಕ್ಷಣಿಕ ಸಲಹೆಗಾರ ಜಗನ್ನಾಥ ನಾಡಿಗೇರ ಮಾತನಾಡಿ ಕ್ರೀಡೆಯಲ್ಲಾಗಲೀ, ಪರೀಕ್ಷೆಯಲ್ಲಾಗಲೀ ಗೆಲ್ಲಬೇಕಾದರೆ ಮನಸ್ಥಿತಿ, ಪ್ರೇರಣೆ ಮತ್ತು ವಿಧಾನಗಳು ಮುಖ್ಯವಾದವುಗಳು ಎಂದರು.

ಯಾವಾಗಲೂ ಸಕಾರಾ ತ್ಮಕ ಮನಸ್ಥಿತಿಯನ್ನು ಹೊಂದಿರಬೇಕು. ಪ್ರತಿ ಕ್ಷಣದಲ್ಲೂ ನಮ್ಮನ್ನು ನಾವು ಪ್ರೇರಣೆ ಮಾಡಿಕೊಳ್ಳುತ್ತಿರಬೇಕು. ಆ ಕ್ಷೇತ್ರದಲ್ಲಿ ಗೆಲ್ಲಲು ಬೇಕಾದ ವಿಧಾನಗಳ ಕುರಿತು ಅರಿವು ಹೊಂದಿರಬೇಕು ಎಂದು ತಿಳಿಸಿದರು. ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಕೆ.ಟಿ. ನಾಗರಾಜನಾಯ್ಕ ಬಹುಮಾನ ವಿತರಿಸಿದರು.

ಶ್ರೀ ತರಳಬಾಳು ಶಾಲೆಯ ಸ್ಥಳೀಯ ಸಲಹಾ ಸಮಿತಿ ಉಪಾಧ್ಯಕ್ಷ ಕೆ.ಜಿ. ಗುರುಬಸಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಎಂ.ಸಿ. ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯಿನಿ ಬಿ.ಎಂ. ರಶ್ಮಿ ಸ್ವಾಗತಿಸಿದರು. ಶಿಕ್ಷಕಿ ಕಾವ್ಯ ವಂದಿಸಿದರು. ಸುಪ್ರಿತಾ ನಿರೂಪಿಸಿದರು.

ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್. ಎಸ್ ಲೇಔಟ್ ಎ ಬ್ಲಾಕ್, ಕುವೆಂಪು ನಗರ, ಎಂ.ಸಿ.ಸಿ ಬಿ ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರೋಡ್, ಬಿಐಇಟಿ ರೋಡ್, ಗ್ಲಾಸ್‌ಹೌಸ್, ಬಾಪೂಜಿ ಸಮುದಾಯ ಭವನ, ಅಂಗವಿಕಲ ಶಾಲೆ, ಲಕ್ಷ್ಮಿ ಫ್ಲೋರ್ ಮಿಲ್, ಎಸ್.ಎನ್ ಲೇಔಟ್, ಜಿ.ಎಚ್ ಪಾರ್ಕ್, ಎಸ್.ಎಸ್. ಲೇಔಟ್ ಎ ಬ್ಲಾಕ್ ಮತ್ತು ಬಿ ಬ್ಲಾಕ್ ಬಸವೇಶ್ವರ ಬಡಾವಣೆ, ಶಾಂತಿನಗರ, ಮಹಾಲಕ್ಷ್ಮೀ ಲೇಔಟ್, ಬಾಲಾಜಿ ನಗರ ಹಾಗೂ ಸುತ್ತಮುತ್ತ ಪ್ರದೇಶಗಳು. ನಿಜಲಿಂಗಪ್ಪ ಲೇಔಟ್, ನೌಕರರ ಸಮುದಾಯ ಭವನ, ಅಥಣಿ ಕಾಲೇಜ್, ಎಮ್‌ಬಿಎ ಕಾಲೇಜ್, ಆಫೀಸರ್ ಕ್ಲಬ್, ಕುಂದವಾಡಕೆರೆ ನೀರು ಸರಬರಾಜು ಘಟಕ, ನಿಜಲಿಂಗಪ್ಪ ಬಡಾವಣೆ, ರಿಂಗ್‌ರೋಡ್, ಕುಂದವಾಡ ರಸ್ತೆ, ಯಲ್ಲಮ್ಮನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

'ನಿರಾಮಯ' ಯೋಜನೆಗೆ ಅರ್ಜಿ ಆಹ್ವಾನ

ದಾವಣಗೆರೆ, ಜ.22- ಜಿಲ್ಲಾ ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 'ನಿರಾಮಯ' ಯೋಜನೆಗೆ ಅರ್ಹ ಬುದ್ದಿಮಾಂದ್ಯ, ಸೆರೆಬ್ರಲ್ ಪಾಲಿಸಿ, ಆಟಿಸಂ ಮತ್ತು ಬಹುವಿಧ ವಿಶೇಷಚೇತನರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿರಾಮಯ ಕಾರ್ಡ್ ಪಡೆಯಲು ಜಿಲ್ಲೆಯ ಆಯಾ ತಾಲ್ಲೂಕಿನ ವಿಶೇಷಚೇತನರು ಕಡ್ಡಾಯವಾಗಿ ಅಂಗವಿಕಲರು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 30 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ, ಹೊನ್ನಾಳಿ ತಾಲ್ಲೂಕು: ಶೈಲಜಾ.ಕೆ.ಎಂ.(9886366809), ಚನ್ನಗಿರಿ: ಕೆ. ಸುಬ್ರಮಣ್ಯಂ (9945738141), ಜಗಳೂರು: ಎಂ.ಕೆ ಶಿವನಗೌಡ (99021 05734), ಹರಿಹರ: ಶಶಿಕಲಾ.ಟಿ (9945458058) ಮತ್ತು ದಾವಣಗೆರೆ ತಾಲ್ಲೂಕು: ಚನ್ನಪ್ಪ.ಬಿ (9590829024) ಸಂಪರ್ಕಿಸಬಹುದೆಂದು ಸಬಲೀಕರಣಾಧಿಕಾರಿ ಡಾ. ಕೆ.ಕೆ.ಪ್ರಕಾಶ್ ತಿಳಿಸಿದ್ದಾರೆ.

ಜೆಡಿಎಸ್‌ನ ಪಂಚರತ್ನ ರಥಯಾತ್ರೆಗೆ ಸ್ವಾಗತ

ದಾವಣಗೆರೆ, ಜ.22- ಜೆಡಿಎಸ್‌ನ ಪಂಚರತ್ನ ರಥಯಾತ್ರೆಗೆ ಎಲ್ಲೆಡೆ ಅಭೂತಪೂರ್ವ ಸ್ವಾಗತ ಸಿಗುತ್ತಿದೆ. ನಮ್ಮದು ನಿಷ್ಠಾವಂತರ ಪಕ್ಷ ಎಂದು ಜೆಡಿಎಸ್ ಮುಖಂಡ ಜೆ. ಅಮಾನುಲ್ಲಾಖಾನ್ ತಿಳಿಸಿದರು.

ಇಂದು ನಗರದ ರೋಟರಿ ಬಾಲಭವನದಲ್ಲಿ ಹಮ್ಮಿಕೊಂಡಿದ್ದ, ಜಾತ್ಯತೀತ ಜನತಾದಳ ಕಾರ್ಮಿಕ ವಿಭಾಗ ದಾವಣಗೆರೆ ವಿಧಾನಸಭಾ ಕ್ಷೇತ್ರದ ಪದಾಧಿಕಾರಿಗಳ ನೇಮಕ ಹಾಗೂ ಸಂಘಟನಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಧಿಕಾರದ ಚುಕ್ಕಾಣಿಯನ್ನು ಆಪರೇಷನ್ ಕಮಲದ ಮೂಲಕ ಹಿಡಿದ ಬಿಜೆಪಿ ಸರ್ಕಾರ ಶೇ. 40ರಷ್ಟು ಕಮೀಷನ್ ಬೆನ್ನತ್ತಿದ್ದು, ಹಿಂದುಳಿದ ವರ್ಗ ಹಾಗೂ ದೀನ ದಲಿತರಿಗೆ ಅನ್ಯಾಯ ಮಾಡುತ್ತಿರುವ ಈ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲು ಮತದಾರರು ಪಣ ತೊಟ್ಟಿದ್ದಾರೆ ಎಂದರು.

ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಪ್ರಾದೇಶಿಕ ಪಕ್ಷಗಳು ಭದ್ರ ಬುನಾದಿ ಹಾಕಿದ್ದು, ಕರ್ನಾಟಕದಲ್ಲೂ ಜನರು ಪ್ರಾದೇಶಿಕ ಪಕ್ಷಕ್ಕೆ ಮನ್ನಣೆ ನೀಡಬೇಕು ಎಂದು ಮನವಿ ಮಾಡಿದರು.

ರೈತರ ಕಷ್ಟ ದೂರ ಮಾಡಲು ಹೆಚ್.ಡಿ. ಕುಮಾರಸ್ವಾಮಿ 50 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿದ್ದರು. ಇದನ್ನು ಕಾಂಗ್ರೆಸ್ ಸಹಿಸಲಿಲ್ಲ. ಅಲ್ಲಿನ ಶಾಸಕರು ಬಿಜೆಪಿಗೆ ಬಿಕರಿಯಾಗಬೇಕಾಯಿತು. ಇದಕ್ಕೆ ಕಾಂಗ್ರೆಸ್ ಹೈಕಮಾಂಡ್ ಕಾರಣ ಎಂದು ಆರೋಪಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಟಿ.ಅಸ್ಗರ್ ಮಾತನಾಡಿ, ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಬಿಜೆಪಿ ವಿಫಲವಾಗಿದೆ. ಕಾಂಗ್ರೆಸ್ ಕಾರ್ಮಿಕರ ಪರವಾಗಿ ಇಲ್ಲ. ದೇವೇಗೌಡರು ಪ್ರಧಾನಿಯಾಗಿದ್ದಾಗ ಕಾರ್ಮಿಕರ ಪರ ಕೆಲಸ ಮಾಡಿದ್ದರು ಎಂದು ಸ್ಮರಿಸಿದರು.

ಮಂಡಕ್ಕಿ ಭಟ್ಟಿಗಳು ಸ್ಥಳಾಂತರವಾಗಿಲ್ಲ. ಅವಲಕ್ಕಿ ಮಿಲ್ ಕಾರ್ಮಿಕರ ಸಮಸ್ಯೆಗಳೂ ಇವೆ. ಬೀಡಿ ಕಾರ್ಮಿಕರಿಗೆ ನಿಗದಿತ ಕೂಲಿ ಸಿಗುತ್ತಿಲ್ಲ. ದಾವಣಗೆರೆ ದಕ್ಷಿಣ ಭಾಗದಲ್ಲಿ 49 ಕೊಳೆಗೇರಿಗಳಿದ್ದು, ಅವುಗಳ ಅಭಿವೃದ್ಧಿಗೆ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯತಂತ್ರಗಳೇನು ಎಂಬುದನ್ನು ಬಹಿರಂಗಪಡಿಸಲಿ ಎಂದು ಆಗ್ರಹಿಸಿದರು.

ಪಕ್ಷದ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ ಮಾತನಾಡಿ, ಕಾರ್ಮಿಕರ ಶ್ರಮ ಇಲ್ಲದೆ ರಾಜ್ಯ ಅಭಿವೃದ್ಧಿ ಸಾಧಿಸದು. 2023ರ ವಿಧಾನಸಭೆ ಚುನಾವಣೆಯಲ್ಲಿ ಮಿಷನ್ 123 ಮೂಲಕ ಉದ್ದೇಶ ಸಫಲತೆ ಕಾಣುವುದು ಜೆಡಿಎಸ್‌ನ ಉದ್ದೇಶವಾಗಿದೆ ಎಂದರು.

ಸಭೆಯಲ್ಲಿ ದಕ್ಷಿಣ ಕ್ಷೇತ್ರದ ಅಧ್ಯಕ್ಷ ಮನ್ಸೂರ್ ಅಲಿ, ಅಲ್ಪಸಂಖ್ಯಾತರ ವಿಭಾಗದ ಜಿಲ್ಲಾಧ್ಯಕ್ಷ ಜಮೀರ್ ಅಹ್ಮದ್ ಖಾನ್, ದಕ್ಷಿಣ ಕಾರ್ಮಿಕ ವಿಭಾಗದ ಅಧ್ಯಕ್ಷ ಉಮರ್ ಫಾರೂಕ್ ರಜ್ವಿ, ಜಿಲ್ಲಾ ಕಾರ್ಯಾಧ್ಯಕ್ಷೆ ರೇಖಾ ಸಿಂಗ್, ಮುಖಂಡರಾದ ದಾದಾಪೀರ್, ಸಿಕಂದರ್ ಬಾಷಾ, ಜಬೀವುಲ್ಲಾ ಇತರರು ಇದ್ದರು.

ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಪ್ರಗತಿ ಸಾಧ್ಯ

ದಾವಣಗೆರೆ, ಜ.22- ನಗರದ ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಸ್ವಾಮಿ ವಿವೇಕಾನಂದರ 160ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಾವಣಗೆರೆ ವಿವಿ ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಮಹಾಂತೇಶ್ ಪಾಟೀಲ್ ಮಾತನಾಡಿ, ಕೌಶಲ್ಯಯುತ ಯುವಕರನ್ನು ತಯಾರಿಸಲು ಯೋಜನೆಗಳನ್ನು ರೂಪಿಸಬೇಕು. ನಮ್ಮ ದೇಶದ ಪರಂಪರೆಯನ್ನು ಗೌರವಿಸಬೇಕು. ಮಾನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಪ್ರಗತಿ ಹೊಂದಲು ಸಾಧ್ಯ ಎಂದು ಪ್ರತಿಪಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಎಸ್.ದಿವಾಕರ್ ನಾಯ್ಕ ಮಾತನಾಡಿ, ಬಸವೇಶ್ವರ, ಅಂಬೇಡ್ಕರ್, ಬುದ್ಧ, ಮಹಾವೀರ, ಸ್ವಾಮಿ ವಿವೇಕಾನಂದರಂತಹ ಯುಗ ಪುರುಷರುಗಳ ಆದರ್ಶ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಸುಂದರ ಜೀವನ ರೂಪಿಸಿಕೊಳ್ಳಲು ಸಾಧ್ಯ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಯುವ ಜನಾಂಗವನ್ನು ಹೊಂದಿದ ದೇಶ ಭಾರತವಾಗಿದೆ. ದೇಶದ ಅಭಿವೃದ್ಧಿಗಾಗಿ ಯುವ ಶಕ್ತಿಯನ್ನು ಬಳಸಿಕೊಳ್ಳಲಾಗುತ್ತಿಲ್ಲ. ನಮ್ಮೆಲ್ಲರ ಪ್ರೇರಣಾ ಶಕ್ತಿಯೇ ವಿವೇಕಾನಂದರು ಎಂದು ಹೇಳಿದರು.

ಪ್ರಶಿಕ್ಷಣಾರ್ಥಿ ಡಿ.ಪಿ.ಶೃತಿ ಮತ್ತು ಹೆಚ್.ರೂಪ ಪ್ರಾರ್ಥಿಸಿದರು. ಪ್ರಶಿಕ್ಷಣಾರ್ಥಿ ಸಿ.ಎಸ್.ಅನುಷಾಕುಮಾರಿ ಸ್ವಾಗತಿಸಿದರು. ಪ್ರಶಿಕ್ಷಣಾರ್ಥಿ ಗೋಣಿಸ್ವಾಮಿ ವಂದಿಸಿದರು. ಪ್ರಶಿಕ್ಷಣಾರ್ಥಿ ಆರ್.ರವಿ.ಅಮೃತಾ ಕಾರ್ಯಕ್ರಮ ನಿರೂಪಿಸಿದರು.

ಶೋಷಣೆ ವಿರುದ್ಧ ಹೋರಾಡಲು ಕಾನೂನು ಸಾಕ್ಷರತೆ ಅತ್ಯುತ್ತಮ ಸಾಧನ

> ಸಂವಿಧಾನವು ಪ್ರತಿ ಪ್ರಜೆಯು ಅನ್ಯಾಯಕ್ಕೆ ಒಳಗಾದಾಗ ನ್ಯಾಯ ದೊರಕಿಸಿಕೊಳ್ಳುವ ಸಮಾನ ಅವಕಾಶ ಕೊಟ್ಟಿದೆ. ಆದರೆ, ಕಾನೂನು ಸಾಕ್ಷರತೆ ತೀರಾ ಕಡಿಮೆ ಇರುವ ನಮ್ಮ ದೇಶದಲ್ಲಿ ಹಕ್ಕುಗಳ ಬಗೆಗಿನ ಸರಿಯಾದ ತಿಳುವಳಿಕೆಯ ಕೊರತೆಯಿಂದ ಮಹಿಳೆಯರು ನ್ಯಾಯ ದೊರಕಿಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ.
>
> - ಎಲ್.ಹೆಚ್.ಅರುಣ್‌ಕುಮಾರ್, ಹಿರಿಯ ನ್ಯಾಯವಾದಿ

ದಾವಣಗೆರೆ, ಜ.22- ಕಾನೂನು ಸಾಕ್ಷರತೆಯು ಜನಸಾಮಾನ್ಯರನ್ನು ಅದರಲ್ಲೂ ಮಹಿಳೆಯರು, ಹಿಂದುಳಿದ ವರ್ಗಗಳಿಗೆ ಸೇರಿದ ಜನರನ್ನು ಶೋಷಣೆ ವಿರುದ್ಧ ಹೋರಾಡಲು ಶಕ್ತರಾಗುವಂತೆ ಮಾಡಲು ಇರುವ ಅತ್ಯುತ್ತಮ ಸಾಧನವಾಗಿದೆ ಎಂದು ಹಿರಿಯ ನ್ಯಾ॥ ಎಲ್. ಹೆಚ್.ಅರುಣ್‌ಕುಮಾರ್ ಅಭಿಪ್ರಾಯ ಪಟ್ಟರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್, ದಲಿತ-ಮುಸ್ಲಿಂ ಮಹಿಳಾ ಒಕ್ಕೂಟ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಸಖಿ ಒನ್ ಸ್ಟಾಪ್ ಸೆಂಟರ್ ಇವರ ಸಹಯೋಗದೊಂದಿಗೆ ನಗರದ ನೆರಳು ಬೀಡಿ ಕಾರ್ಮಿಕರ ಯೂನಿಯನ್ ಕಚೇರಿಯಲ್ಲಿ ಮೊನ್ನೆ ಆಯೋಜಿಸಲಾಗಿದ್ದ ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆ ಮತ್ತು ಮಹಿಳೆಯರ ರಕ್ಷಣೆಯ ಕಾನೂನುಗಳು ಹಾಗೂ ಜೀವನಾಂಶ ಕುರಿತು ಕಾರ್ಯಕ್ರಮದಲ್ಲಿ 'ಗೃಹ ಹಿಂಸೆ ಕಾಯಿದೆ ಏನು, ಎತ್ತ' ಎನ್ನುವ ಪುಸ್ತಕ ಬಿಡುಗಡೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರ ಕಾನೂನುಗಳೆಂದರೆ ಅವು ಮಹಿಳಾ ಸಮಸ್ಯೆಗಳ ಪ್ರಸ್ತಾಪವೇ ಆಗಿದೆ. ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಸಾವು, ವಿಚ್ಛೇದನ, ಮರ್ಯಾದಾ ಹತ್ಯೆ, ಕೌಟುಂಬಿಕ ದೌರ್ಜನ್ಯ, ಹೆಣ್ಣು ಭ್ರೂಣ ಹತ್ಯೆ, ಅತ್ಯಾಚಾರ ಇವುಗಳಿಗೆ ಸಂಬಂಧಿಸಿದ ಕಾನೂನು ಸ್ವರೂಪವೇ ಈ ಸಮಸ್ಯೆಗಳು ಸಮಾಜವನ್ನು ಆವರಿಸಿಕೊಂಡಿರುವ ಬಗೆಯನ್ನು ಅನಾವರಣಗೊಳಿಸುತ್ತವೆ ಎಂದು ಹೇಳಿದರು.

12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಪುರುಷರಿಗೆ ಸರಿಸಮಾನವಾದ ಪ್ರಾತಿನಿಧ್ಯ ಕೊಡಲಾಗಿತ್ತು. ಆದರೆ, ಭಾರತದಲ್ಲಿ ಪ್ರಜಾಪ್ರಭುತ್ವ ಬಂದು 7 ದಶಕಗಳೇ ಕಳೆದರೂ ಶಾಸನ ಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಕೊರತೆ ಎದ್ದು ಕಾಣುತ್ತಿದೆ. ಮಹಿಳೆಯರ ಪರ ಕಾನೂನುಗಳು, ಯೋಜನೆಗಳು ಅನುಷ್ಠಾನಗೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳಲ್ಲಿನ ಮಹಿಳೆಯರು ತಮ್ಮ ಪ್ರಾತಿನಿಧ್ಯಕ್ಕಾಗಿ ಹೋರಾಟ ಮಾಡಬೇಕೆಂದು ಕರೆ ನೀಡಿದ ಅವರು, ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ ವರದಿ ಪ್ರಕಾರ ಭಾರತೀಯ ಕುಟುಂಬಗಳಲ್ಲಿ 70ರಷ್ಟು ಮಹಿಳೆಯರು ಗೃಹ ಹಿಂಸೆಗಳಿಗೆ ತುತ್ತಾಗುತ್ತಿರುವುದು ವಿಷಾದನೀಯ ಸಂಗತಿ ಎಂದು ತಿಳಿಸಿದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷೆ ಜಬೀನಾ ಖಾನಂ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಎಂ.ಕರಿಬಸಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಅಧಿಕಾರಿ ಪೂರ್ಣಿಮಾ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ಯಾನಲ್ ವಕೀಲರಾದ ಅನ್ನಪೂರ್ಣ, ಬಾಲ ನ್ಯಾಯ ಮಂಡಳಿಯ ಸದಸ್ಯೆ ವಿಜಯಮಾಲ ಮುಂಡಾಸದ, ಸಖಿ ಒನ್ ಸ್ಟಾಪ್ ಸೆಂಟರ್‌ನ ವಕೀಲರಾದ ತಂಜಿಮಾ ಕೌಸರ್ ಇವರೆಲ್ಲರೂ ಮಹಿಳಾ ಪರ ಇರುವ ಕಾನೂನು ಕುರಿತು ಉಪನ್ಯಾಸ ನೀಡಿದರು. ಈ ವೇಳೆ ಮೇಘಾ, ನೆರಳು ಬೀಡಿ ಕಾರ್ಮಿಕರ ಯೂನಿಯನ್‌ನ ಹಸೀನಾಬಾನು ಇತರರು ಇದ್ದರು.

ಮುಕ್ತ ವಿವಿ : ವಿವಿಧ ಕೋರ್ಸ್‌ಗಳ ಪ್ರವೇಶ ಅರ್ಜಿ ಕರೆ

ದಾವಣಗೆರೆ, ಜ.22 - ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2022- 23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಬಿ.ಎ./ಬಿ.ಕಾಂ, ಬಿ.ಎಸ್ಸಿ, ಬಿ.ಲಿಬ್.ಎಲ್.ಎಸ್ಸಿ, ಬಿ.ಸಿ.ಎ.ಬಿ.ಬಿ.ಎ., ಎಂ.ಎ.-ಎಂ.ಸಿ.ಜೆ., ಎಂ.ಬಿ.ಎ., ಎಂ.ಎಸ್ಸಿ. ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಮತ್ತು ಪಿ.ಜಿ. ಡಿಪ್ಲೋಮಾ/ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿನಿಯರಿಗೆ, ಡಿಫೆನ್, ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ ಮತ್ತು ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ರಿಯಾಯಿತಿ ಇರುತ್ತದೆ.

ಎಂ.ಬಿ.ಎ ಕೋರ್ಸುಗಳನ್ನು ಹೊರತುಪಡಿಸಿ, ಕೋವಿಡ್-19 ನಿಂದ ಮೃತಪಟ್ಟವರ ಮಕ್ಕಳಿಗೆ, ತೃತೀಯ ಲಿಂಗಿ ಹಾಗೂ ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಹಾಗೂ ಎರಡು ಶೈಕ್ಷಣಿಕ ಕೋರ್ಸುಗಳನ್ನು ಏಕಕಾಲದಲ್ಲಿ ಒಂದು ಭೌತಿಕ ಕ್ರಮದಲ್ಲಿ ಮತ್ತೊಂದು ದೂರಶಿಕ್ಷಣ ಕ್ರಮದಲ್ಲಿ ಓದಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಸಹಾಯವಾಣಿ ಸಂ: 8690544544, 8800335638 ಅಥವಾ ಖುದ್ದಾಗಿ ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರ, ಶ್ರೀ ಜೆ.ಹೆಚ್ ಪಟೇಲ್ ಬಡಾವಣೆ, ದಾವಣಗೆರೆ ಇಲ್ಲಿ ಸಂಪರ್ಕಿಸಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್ ಅವರಿಗೆ ಸನ್ಮಾನ

ದಾವಣಗೆರೆ, ಜ.22- ಹಾವೇರಿಯಲ್ಲಿ ಕಳೆದ ವಾರ ನಡೆದ 86 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ, ಸನ್ಮಾನ ಸ್ವೀಕರಿಸಲು ಎಸ್.ಎ. ರವೀಂದ್ರನಾಥ್ ಅವರಿಗೆಅನಾರೋಗ್ಯನಿಮಿತ್ತಸಾಧ್ಯವಾಗಿರಲಿಲ್ಲವಾದ್ದರಿಂದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಷಿಯವರು ಇಂದು ಖಾಸಗಿ ಕಾರ್ಯಕ್ರಮದ ನಿಮಿತ್ತ ದಾವಣಗೆರೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮತ್ತು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಸಂಘಟನಾ ಕಾರ್ಯದರ್ಶಿ ಜಿ. ರುದ್ರಯ್ಯನವರ ಜೊತೆಗೂಡಿ ಎಸ್.ಎ. ರವೀಂದ್ರನಾಥ್‌ರವರ ಮನೆಗೆ ತೆರಳಿ ಗೌರವ ಪೂರ್ವಕವಾಗಿ ಅವರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಡಾ. ಮಹೇಶ್ ಜೋಷಿ ಮಾತನಾಡಿ, ಎಸ್.ಎ. ರವೀಂದ್ರನಾಥ್‌ರವರ ಸರಳ, ಸಜ್ಜನಿಕೆಯ ವ್ಯಕ್ತಿತ್ವವನ್ನು, ಕನ್ನಡಾಭಿಮಾನವನ್ನು ಹಾಗೂ ದೀರ್ಘ ಕಾಲದ ರೈತ ಪರ ಹೋರಾಟವನ್ನು, ಅವರ ಸಾಮಾಜಿಕ ಕಳಕಳಿ ಮತ್ತು ಸೇವೆಯನ್ನು ಪರಿಷತ್ತು ಸದಾ ಸ್ಮರಿಸುತ್ತದೆ. ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ನಿಮ್ಮನ್ನು ಹೃದಯತುಂಬಿ ಹರಸಿ, ಸನ್ಮಾನಿಸುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿ, ಗೌರವ ಸಮರ್ಪಿಸಿದರು.

ಸನ್ಮಾನ ಸ್ವೀಕರಿಸಿದ ಎಸ್.ಎ. ರವೀಂದ್ರನಾಥ್ ಅವರು ಮಾತನಾಡಿ, ಹಾವೇರಿಯ ಯಶಸ್ವೀ ಸಮ್ಮೇಳನವನ್ನು ನಾನು ದೂರದರ್ಶನದಲ್ಲಿ ವೀಕ್ಷಿಸಿ ಸಂತಸಪಟ್ಟಿದ್ದೇನೆ ಎಂದು ಸಮ್ಮೇಳನದ ಬಗ್ಗೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಹಾವೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 'ನಾ ಭೂತೋ ನಾ ಭವಿಷ್ಯತಿ' ಎನ್ನುವಂತೆ ಅತ್ಯಂತ ಯಶಸ್ವಿಯಾಗಿ ಯಾವುದೇ ಲೋಪವಿಲ್ಲದಂತೆ ನಡೆದು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೇ ದಾಖಲೆ ನಿರ್ಮಿಸಿದೆ ಎಂಬುದನ್ನು ಎಸ್.ಎ. ರವೀಂದ್ರನಾಥ್ ಅವರ ಗಮನಕ್ಕೆ ತರುತ್ತಾ, ಕನ್ನಡ ಸಾಹಿತ್ಯ ಪರಿಷತ್ತಿನ ಈ ಸನ್ಮಾನವನ್ನು ಹಿರಿಯರಾದ ತಾವುಗಳು ಅಭಿಮಾನದಿಂದ ಸ್ವೀಕರಿಸಿದ್ದಕ್ಕಾಗಿ ದಾವಣಗೆರೆ ಜಿಲ್ಲೆಯ ಸಮಸ್ತ ಕನ್ನಡಾಭಿಮಾನಿಗಳ ಪರವಾಗಿ ಅವರಿಗೆ ಧನ್ಯವಾದವನ್ನು ಸಮರ್ಪಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಜಿ. ಜಗದೀಶ್ ಕೂಲಂಬಿ, ದಾವಣಗೆರೆ ತಾಲ್ಲೂಕು ಕ.ಸಾ.ಪ ಅಧ್ಯಕ್ಷೆ ಶ್ರೀಮತಿ ಸುಮತಿ ಜಯಪ್ಪ, ಜಿಲ್ಲಾ ಪದಾಧಿಕಾರಿ ಶ್ರೀಮತಿ ರುದ್ರಾಕ್ಷಿಬಾಯಿ, ತಾಲ್ಲೂಕು ಪದಾಧಿಕಾರಿಗಳಾದ ಬೇತೂರು ಷಡಾಕ್ಷರಪ್ಪ, ಶಿವಕುಮಾರ್ ಆರ್, ಹರಿಹರ ತಾಲ್ಲೂಕು ಕ.ಸಾ.ಪ ಸಂಘಟನಾ ಕಾರ್ಯದರ್ಶಿ ಸದಾನಂದ್ ಕುಂಬಳೂರು ಮತ್ತಿತರರು ಉಪಸಿತರಿದ್ದರು.

ನಗರದಲ್ಲಿ ನಾಳೆ ಸುದರ್ಶನ ಕ್ರಿಯೆ ಶಿಬಿರ

ದಾವಣಗೆರೆ, ಜ.22- ಗುರುದೇವ ಶ್ರೀ ರವಿಶಂಕರ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ 18 ವರ್ಷ ಮೇಲ್ಪಟ್ಟವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನ ಆವರಣದ 1ನೇ ಮಹಡಿಯಲ್ಲಿ ನಾಡಿದ್ದು ದಿನಾಂಕ 24ರ ಮಂಗಳವಾರದಿಂದ ಇದೇ ದಿನಾಂಕ 29 ರವರೆಗೆ ಬೆಳಿಗ್ಗೆ 6.30 ರಿಂದ 8.30 ವರೆಗೆ, ಸಂಜೆ ಸಂಜೆ 6.30 ರಿಂದ 8.30 ರ ವರೆಗೆ ನಡೆಯಲಿದೆ. ವಿವರಕ್ಕೆ : 99005-01877, 77601-55659.

ಬೇವಿನ ಮರ ನೆಟ್ಟು, ಮಾವು ಬಯಸುವುದು ತಪ್ಪು

ಮೌಲ್ಯಾಧಾರಿತ ಶಿಕ್ಷಣ ನೀಡದ ಹೊರತು, ಸಮಾಜದ ಸುರಕ್ಷತೆ ಸಾಧ್ಯವಿಲ್ಲ: ಭಾನುಪ್ರಕಾಶ್

ದಾವಣಗೆರೆ, ಜ. 22- ಬೇವಿನ ಮರ ನೆಟ್ಟು, ಮಾವು ಬಯಸುವುದು ತಪ್ಪು. ಹಾಗೆಯೇ ಆರಂಭದಲ್ಲಿಯೇ ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡದ ಹೊರತು, ಸಮಾಜ ಸುರಕ್ಷಿತವಾಗಿರಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಬಿ. ಭಾನುಪ್ರಕಾಶ್ ಎಚ್ಚರಿಸಿದರು.

ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ 'ಸೋಮೇಶ್ವರೋತ್ಸವ-2023'ರ ಸಂಗೀತೋತ್ಸವ ಮತ್ತು ಸಮಾರೋಪ ಸಮಾರಂಭದಲ್ಲಿ ಅವರು ಸಮಾರೋಪ ನುಡಿಗಳನ್ನಾಡಿದರು.

ಸ್ವಾತಂತ್ರ್ಯ ಬಂದ ಹೊಸದರಲ್ಲಿ ಪರಂಪರೆಯಿಂದ ಕಲಿತ ಶಿಕ್ಷಣ ಬಿಟ್ಟರೆ, ಸಂಸ್ಕೃತಿ, ಸಂಸ್ಕಾರ ಕುರಿತ ನೈತಿಕ ಶಿಕ್ಷಣ ಇಲ್ಲಿಯವರೆಗೂ ಶಿಕ್ಷಣ ವ್ಯವಸ್ಥೆಯಲ್ಲಿ ತರಲು ಸಾಧ್ಯವಾಗಿಲ್ಲ. ಆರು ವರ್ಷದ ಮಗುವಿಗೆ ಎಂಟು ಭಾಷೆಗಳನ್ನು ಕಲಿಯುವ ಶಕ್ತಿ ಇದೆ. ಆದರೆ ಇಂದಿಗೂ ಯಾವ ಭಾಷಾ ಸೂತ್ರ ಇರಬೇಕು ಎಂಬ ಬಗ್ಗೆ ತೀರ್ಮಾನ ಮಾಡಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ವೃದ್ಧಾಶ್ರಮ, ಅಬಲಾಶ್ರಮಗಳು ಹೆಚ್ಚಾಗುತ್ತಿರುವುದಕ್ಕೆ, ಅತ್ಯಾಚಾರಗಳು ಹೆಚ್ಚಾಗಲು ಮೂಲಭೂತ ದೇಶದ ಧರ್ಮ ಮರೆತು ಸ್ವಾರ್ಥತೆಯನ್ನು ಶಿಕ್ಷಣದಲ್ಲಿ ತಂದಿದ್ದೇ ಕಾರಣ. ನಾವು, ನಮ್ಮ ಸಮಾಜ, ನಮ್ಮ ದೇಶ, ಎಲ್ಲರೂ ಒಟ್ಟಿಗೆ ಬದುಕ ಬೇಕು ಎನ್ನುವ ಸಿದ್ಧಾಂತ ಇರುವುದು ಭಾರತ ದೇಶದಲ್ಲಿ ಮಾತ್ರ. ಅದನ್ನು ಇಂದಿನ ಮಕ್ಕಳಿಗೆ ತಿಳಿಸುವ ಅಗತ್ಯವಿದೆ ಎಂದು ಹೇಳಿದರು.

ಸ್ವಾಂತಂತ್ರ್ಯ, ಸಮಾನತೆ ಬಂದಿದೆ. ಆದರೆ ಸಹೋದರತ್ವ ಇನ್ನೂ ಸಿಕ್ಕಿಲ್ಲ. ಅಂದಿನಿಂದಲೂ ನಮ್ಮ ಸಮಾಜ ಕರ್ತವ್ಯ ಪ್ರಜ್ಞೆಯನ್ನು ಹೇಳಿಕೊಟ್ಟಿದೆ. ನಮ್ಮ ಸಮಾಜ ನಿಂತಿರುವುದೇ ಪಾಪ ಪುಣ್ಯಗಳ ಮೇಲೆ. ಮಕ್ಕಳು ತಮ್ಮ ಬದುಕು ಕಟ್ಟಿಕೊಳ್ಳುವಂತಹ ಶಿಕ್ಷಣ ಹೇಗಿರಬೇಕೆಂದು ಸಮಾಜ ನಿರ್ಧರಿಸಬೇಕಿದೆಯೇ ಹೊರತು, ಸರ್ಕಾರವಲ್ಲ ಎಂದು ಭಾನುಪ್ರಕಾಶ್ ಹೇಳಿದರು.

ಜಗಳೂರಿನ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ, ಭಾರತ ದೇಶ ತನ್ನ ಸಂಸ್ಕೃತಿ, ಸಂಪ್ರದಾಯ, ಅಧ್ಯಾತ್ಮಿಕತೆಯಿಂದಾಗಿ ವಿಶ್ವಕ್ಕೆ ಗುರುವಾಗಿ ಮೆರೆದ ದೇಶವಾಗಿದೆ. ಇಂತಹ ಸಂಸ್ಕೃತಿ ಹುಟ್ಟುಹಾಕಿದ್ದು ನಮ್ಮ ದೇಶದ ಸಂತರು, ಪುಣ್ಯ ಪುರುಷರು ಎಂದು ಹೇಳಿದರು.

ಅನ್ಯಾಯ ಮಾಡಬೇಡ. ಅದು ಸರ್ವನಾಶಕ್ಕೆ ಎಡೆ ಮಾಡಿಕೊಡುತ್ತದೆ. ಅನ್ಯಾಯವನ್ನು ತಡೆ. ತಡೆಯುವ ಶಕ್ತಿ ಇಲ್ಲದಿದ್ದರೆ ಅಲ್ಲಿರಬೇಡ ಎನ್ನುವ ಗುಣಗಳನ್ನು ಹಿರಿಯರು ಹೇಳಿದ್ದಾರೆ ಅದನ್ನು ಪಾಲಿಸಬೇಕು ಎಂದು ಹೇಳಿದರು.

ಲೇಖಕ, ಅಂಕಣಕಾರ ಎ.ಆರ್. ಮಣಿಕಾಂತ್ ಮಾತನಾಡಿ, ನಿನ್ನಿಂದ ಏನೂ ಸಾಧ್ಯವಿಲ್ಲ ಎಂದು ಬೈದು ಮಕ್ಕಳನ್ನು ನಿರಾಶೆಗೊಳಿಸಬೇಡಿ. ಪ್ರೋತ್ಸಾಹದಾಯಕ ಮಾತುಗಳನ್ನಾಡುವ ಮೂಲಕ ಪ್ರೇರೇಪಿಸಿರಿ ಎಂದು ಪೋಷಕರಿಗೆ ಕಿವಿ ಮಾತು ಹೇಳಿದರು.

ಅತಿಯಾದ ಆತ್ಮವಿಶ್ವಾಸ ಒಳ್ಳೆಯದಲ್ಲ. ಪರೀಕ್ಷೆ ಬಂದಾಗ ಓದುತ್ತೇನೆ. ಕೊನೆಯ ಒಂದು ತಿಂಗಳು ಅಥವಾ ಒಂದು ವಾರ, ಒಂದು ದಿನದಲ್ಲಿ ಓದುತ್ತೇನೆ ಎಂಬ ಆತ್ಮ ವಿಶ್ವಾಸ ಒಳ್ಳೆಯದಲ್ಲ. ಆರಂಭದ ದಿನಗಳಿಂದಲೇ ಓದಲು ಆರಂಭಿಸಿದಾಗ ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಿ, ಉತ್ತಮ ಅಂಕ ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪೋಷಕರಿಗೆ ಎಷ್ಟೇ ಕೆಲಸಗಳ ಒತ್ತಡವಿದ್ದರೂ, ಮಕ್ಕಳಿಗಾಗಿ ಒಂದು ಅಥವಾ ಎರಡು ಗಂಟೆ ಮೀಸಲಿಡಬೇಕು. ಒಂದೆರಡು ಬಾರಿ ಹೇಳಿಕೊಟ್ಟಿದ್ದು ಅರ್ಥವಾಗಿಲ್ಲ ಎಂದು ಮಕ್ಕಳ ಮೇಲೆ ಸಿಡಿಮಿಡಿಗೊಳ್ಳಬಾರದು. ಕೆಲ ಮಕ್ಕಳಿಗೆ, ಕೆಲವೊಮ್ಮೆ ಹತ್ತು ಬಾರಿ ಹೇಳಿದರೂ ಅರ್ಥವಾಗುವುದಿಲ್ಲ. ಇದನ್ನು ಅರಿತು ಪ್ರೀತಿಯಿಂದ ಹೇಳಿಕೊಡಬೇಕು. ಪ್ರತಿ ಮನೆಯಲ್ಲಿಯೂ ಒಬ್ಬ ಹೀರೋ ಆಗಿರುತ್ತಾನೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ದಿವ್ಯಚೇತನ, ಅಂತರರಾಷ್ಟ್ರೀಯ ಈಜುಪಟು ವಿಶ್ವಾಸ್ ಕೆ.ಎಸ್. ಮಾತನಾಡಿ, ಅಂಗವಿಕಲತೆ ಶಾಪವಲ್ಲ, ಅದನ್ನು ವರವನ್ನಾಗಿ ಮಾರ್ಪಡಿಸಿಕೊಳ್ಳಬೇಕು. ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಹತ್ತು ವರ್ಷದವನಿದ್ದಾಗ ಆಕಸ್ಮಿಕ ಅಪಘಾತದಿಂದ ಕೈಗಳನ್ನು ಕಳೆದುಕೊಳ್ಳಬೇಕಾಯಿತು. ನನ್ನ ತಂದೆಯೂ ಮೃತಪಟ್ಟರು. ಪ್ರತಿ ಕೆಲಸಕ್ಕೂ ತಾಯಿಯನ್ನೇ ಅವಲಂಬಿಸಬೇಕಾಗಿತ್ತು. ಜೀವನವೇ ನಿರಾಸೆಯಾಗಿ ಖಿನ್ನತೆಗೆ ಒಳಗಾಗಿದ್ದೆ. ಆದರೆ ಸ್ನೇಹಿತರು, ಕೆಲ ಹಿತೈಷಿಗಳು ಧೈರ್ಯ ತುಂಬಿದರು.

ಮೊದಲು ಈಜು ನನಗೆ ಹವ್ಯಾಸವಾಗಿತ್ತು. ಅದನ್ನೇ ಅಭ್ಯಾಸ ಮಾಡಿ ಕ್ರೀಡೆಯಲ್ಲಿ ಭಾಗವಹಿಸತೊಡಗಿದೆ. ಛಲ ಹಾಗೂ ಆತ್ಮ ವಿಶ್ವಾಸದಿಂದ ಪ್ರಾಕ್ಟೀಸ್ ಮಾಡತೊಡಗಿದೆ. ಭಾರತಕ್ಕೆ 9 ಪದಕ, ರಾಜ್ಯಕ್ಕೆ 21 ಪದಕ ತಂದೆ. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಯಿತು ಎಂದು ತಮ್ಮ ಯಶೋಗಾಥೆ ವಿವರಿಸಿದರು.

ಮಾರ್ಷಲ್ ಆರ್ಟ್‌ನಲ್ಲಿ 7 ಪದಕ ಪಡೆದಿದ್ದಾಗಿ ಹೇಳಿದ ಅವರು, ನನ್ನದೇ ಆದ ಕಥೆಯ ಸಿನಿಮಾದಲ್ಲಿ ನಾಯಕನಾಗಿ ಅಭಿನಯಿಸಿದ್ದೇನೆ. ಇದೀಗ ಗೆದ್ದು ಬಂದ ಮೇಲೆ ಸಮಾಜ ಗುರುತಿಸಿ, ಸನ್ಮಾನಿಸುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪತ್ರಿಕಾ ಛಾಯಾಗ್ರಾಹಕ ಎಲ್. ವಿವೇಕಾನಂದ ಬದ್ದಿ ಅವರಿಗೆ 'ಸೋಮೇಶ್ವರ ಸಿರಿ' ಮತ್ತು ಎಸ್ಸೆಸ್ಸೆಲ್ಸಿಯಲ್ಲಿ 621 ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿ ಟಿ. ಡಿ.ಆರ್. ಧೀರಜ್ ಅವರಿಗೆ 'ಸಾಧನಾ ಸಿರಿ' ಪುರಸ್ಕಾರ ನೀಡಲಾಯಿತು.

ಹೆಸರಾಂತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಹಾಗೂ ಎಂ.ಡಿ. ಪಲ್ಲವಿ ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಸಂಸ್ಥೆಯ ಸಂಸ್ಥಾಪಕ ಕೆ.ಎಂ. ಸುರೇಶ್, ಮಹಾನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಉಪಸ್ಥಿತರಿದ್ದರು.

ನಾಡಿದ್ದು ರಂಭಾಪುರಿ ಜಗದ್ಗುರುಗಳ ಪೀಠಾರೋಹಣ ವರ್ಧಂತಿ ಉತ್ಸವ

ಶ್ರೀ ರಂಭಾಪುರಿ ಪೀಠ (ಬಾಳೆಹೊನ್ನೂರು), ಜ.22– ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರ 32ನೇ ಪೀಠಾರೋಹಣದ ವರ್ಧಂತಿ, ಮಹೋತ್ಸವ, ಶ್ರೀ ವೀರಭದ್ರಸ್ವಾಮಿ ಹಾಗೂ ಶ್ರೀ ಮಾಲತೇಶಸ್ವಾಮಿ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ ಮತ್ತು ಜನ ಜಾಗೃತಿ ಧರ್ಮ ಸಮಾರಂಭ ಹಾವೇರಿ ತಾಲ್ಲೂಕು ನಾಗನೂರಿನಲ್ಲಿ ನಾಡಿದ್ದು ದಿನಾಂಕ 24 ರಂದು ಜರುಗಲಿದೆ.

ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಶ್ರೀ ಬಂಕಾಪುರ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶ್ರೀ ಕೂಡಲ ಗುರುಮಹೇಶ್ವರ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸುವರು. ಹಾವೇರಿ ಸಂಸದ ಶಿವಕುಮಾರ ಸಿ. ಉದಾಸಿ ಉದ್ಘಾಟನೆ ಮಾಡುವ ಸಮಾರಂಭದಲ್ಲಿ ಬ್ಯಾಡಗಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ ಶ್ರೀ ಪೀಠದ ವಾರ್ತಾ ಸಂಕಲನ ಬಿಡುಗಡೆ ಮಾಡುವರು.

ಸಂಜೆ 4 ಗಂಟೆಗೆ ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ನಾಗನೂರು ಗ್ರಾಮದಲ್ಲಿ ಜರುಗುವುದು.

ನಾಳೆ ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ರಜತ ಮಹೋತ್ಸವ

ದಾವಣಗೆರೆ, ಜ. 22 – ನಗರದ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ ಪ್ರತಿಷ್ಠಾಪನೆ ರಜತ ಮಹೋತ್ಸವ ಹಾಗೂ ರಥೋತ್ಸವ ಕಾರ್ಯ ಕ್ರಮವನ್ನು ನಾಡಿದ್ದು ದಿನಾಂಕ 24ರ ಮಂಗಳ ವಾರದಿಂದ ಇದೇ ದಿನಾಂಕ 28ರ ಶನಿವಾರದವರೆಗೆ ಐದು ದಿನಗಳ ಕಾಲ ನೆರವೇರಿಸಲಾಗುವುದು ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಬ್ರವರಿ 25ರ ಬುಧವಾರ ಸಂಜೆ 5.30ಕ್ಕೆ ಶ್ರೀ ಶ್ರೀನಿವಾಸ ಕಲ್ಯಾಣ ಕಾರ್ಯಕ್ರಮ ನೆರವೇರಲಿದೆ.

ಇದೇ ದಿನಾಂಕ ಫೆ.28ರ ಶನಿವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ ನೆರವೇರಲಿದೆ. ಅಂದು ಬೆಳಿಗ್ಗೆ 11.30ಕ್ಕೆ ಹೊರನಾಡು ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಾಧಿಕಾರಿ ಭೀಮೇಶ್ವರ ಜೋಷಿ ಅವರಿಂದ ಆಶೀರ್ವಚನ ನೆರವೇರಲಿದೆ.

ಪ್ರತಿದಿನ ಸಂಜೆ 5.30ರಿಂದ ದೇವಸ್ಥಾನದ ಪಕ್ಕದಲ್ಲಿರುವ ಲಯನ್ಸ್ ಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಲಿವೆ.

ಪತ್ರಿಕಾಗೋಷ್ಠಿಯಲ್ಲಿ ದೇವಸ್ಥಾನ ಸಮಿತಿಯ ಪ್ರಕಾಶ್ ಪಾಟೀಲ್, ವೀರಭದ್ರ ರಾವ್, ಕಡೇಕೊಪ್ಪ ನಾಗಭೂಷಣ್, ಪ್ರಭಾ ರವೀಂದ್ರ, ವೈ.ಬಿ. ಸತೀಶ್, ನಟರಾಜ್, ಬಿ.ಹೆಚ್. ಸತೀಶ್, ರವೀಂದ್ರ ಜೈನ್, ತಾತಾ ವೆಂಕಟಾಚಲಪತಿ ಶೆಟ್ರು, ತಾತಾ ಕೆ. ಜಯಂತ್, ಮಂಜಣ್ಣ ಕಂಬಳಿ ಮತ್ತಿತರರು ಉಪಸ್ಥಿತರಿದ್ದರು.

ಮತದಾರರ ಮಾಹಿತಿ ಸಂಗ್ರಹಣೆ- ಮನೆ ಮನೆ ಸಮೀಕ್ಷೆ ನಿಷೇಧ

ದಾವಣಗೆರೆ, ಜ.22- ಜಿಲ್ಲಾ ವ್ಯಾಪ್ತಿಯಲ್ಲಿ ಸಂಘ-ಸಂಸ್ಥೆಗಳು, ಮತದಾರರಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗಳನ್ನು ಭೌತಿಕವಾಗಿ ಮತ್ತು ತಂತ್ರಜ್ಞಾನ ಸಲಕರಣೆಗಳ ಮೂಲಕ ಸಂಗ್ರಹಣೆ ಮಾಡುವುದಾಗಲೀ, ಮನೆ-ಮನೆ ಸಮೀಕ್ಷೆ ಮಾಡುವುದಾಗಲೀ, ಗುರುತಿನ ಚೀಟಿಗಳನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಗುರುತಿನ ಚೀಟಿಯನ್ನು ಮತದಾರರಿಗೆ ನೇರವಾಗಿ ಅಂಚೆ ಮೂಲಕ ಮತ್ತು ಮತಗಟ್ಟೆ ಅಧಿಕಾರಿಗಳ ಮೂಲಕ ವಿತರಿಸಲಾಗುತ್ತದೆ. ಮತದಾರರು ಅನಧಿಕೃತ ಸಂಸ್ಥೆ/ವ್ಯಕ್ತಿಗಳಿಗೆ ಹಣ ನೀಡಿ ಗುರುತಿನ ಚೀಟಿಗಳನ್ನು ಪಡೆಯಬಾರದು ಮತ್ತು ಇಂತಹ ಪ್ರಕರಣಗಳು ಕಂಡುಬಂದಲ್ಲಿ ಜಿಲ್ಲಾ ಮತದಾರರ ಸಹಾಯವಾಣಿ 1950ಕ್ಕೆ ಮಾಹಿತಿ ನೀಡಲು ಸಹಾಯಕ ಮತದಾರರ ನೋಂದಣಾಧಿಕಾರಿಗಳು ತಿಳಿಸಿದ್ದಾರೆ.

ಸಮಾಜ ಪರಿವರ್ತನೆ ಮಾಡುವ ಶಕ್ತಿ ಶಿಕ್ಷಣಕ್ಕಿದೆ

ಹರಪನಹಳ್ಳಿ

ಹರಪನಹಳ್ಳಿ, ಜ. 22- ಸಮಾಜದ ಪರಿವರ್ತನೆ ಮಾಡುವ ಶಕ್ತಿ ಶಿಕ್ಷಣಕ್ಕೆ ಇದೆ ಎಂದು ತೆಗ್ಗಿನಮಠದ ಶ್ರೀ ವರ ಸದ್ಯೋಜಾತ ಸ್ವಾಮೀಜಿ ಹೇಳಿದರು.

ಪಟ್ಟಣದ ಮೇಗಳಪೇಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಹರಪನಹಳ್ಳಿ ಸಾಹಿತ್, ಶೈಕ್ಷಣಿಕ, ಧಾರ್ಮಿಕವಾಗಿ ಮುಂದುವರೆದಿದ್ದು ಮಕ್ಕಳಿಗೆ ಶಿಕ್ಷಣ ಕೊಡಿಸುವುದರವುದರ ಜೊತೆಗೆ ಸಂಸ್ಕಾರ ಕೊಡಬೇಕು. ಒಂದು ಶಾಲೆ ತೆರೆದರೆ ನೂರು ಜೈಲುಗಳನ್ನು ಮುಚ್ಚಿದಂತೆ. ಹಾಗಾಗಿ ಪ್ರತಿಯೊಬ್ಬರು ಶಿಕ್ಷಣವಂತರಾಗಬೇಕು. 1922 ರಲ್ಲಿ ಆರಂಭವಾದ ಸರ್ಕಾರಿ ಶಾಲೆ ಇಂದು ಶತಮಾನೋತ್ಸವ ಆಚರಿಸುತ್ತಿದ್ದು , ಅನ್ನದಾನಕ್ಕಿಂತ ಅಕ್ಷರ ಜ್ಞಾನ ಬಹು ಮುಖ್ಯವಾಗಿದೆ. ತಾಯಿ ಮೊದಲ ಗುರುವಾದರೆ, ಶಿಕ್ಷಕ ಎರಡನೇ ಗುರುವಾಗಿ ಖ್ಯಾತೀ ಹೊಂದಿದ್ದಾನೆ. ಇಲ್ಲಿ ಕಲಿತ ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ, ಅರೆ ಸರ್ಕಾರಿ ಉದ್ಯೋಗದಲ್ಲಿದ್ದು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ ಎಂದರು.

ಶಾಸಕ ಜಿ. ಕರುಣಾಕರ ರೆಡ್ಡಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಶತಮಾನ ಪೂರೈಸಿದ 28 ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ 450 ಶಾಲಾ ಕೊಠಡಿಗಳನ್ನು ನಿರ್ಮಿಸಿದ್ದೇವೆ, ಈ ಮೇಗಳಪೇಟೆ ಶಾಲೆಗೆ 5 ಕೊಠಡಿಗಳನ್ನು ನಿರ್ಮಿಸಿ ಕೊಟ್ಟಿರುವುದಾಗಿ ಹೇಳದರು.

ಡಿಡಿಪಿಐ ಜಿ.ಕೊಟ್ರೇಶ್ ಮಾತನಾಡಿ, ಮಕ್ಕಳನ್ನು ಶಾಲೆಯಲ್ಲಿ ವಿವಿಐಪಿ ರೀತಿ ಕಂಡು ಗುಣ ಮಟ್ಟದ ಶಿಕ್ಷಣ ಕೊಡಬೇಕು, ನೌಕರಿಗಾಗಿ ಶಿಕ್ಷಣ ಅಲ್ಲ, ಜ್ಞಾನಕ್ಕಾಗಿ ಶಿಕ್ಷಣ ಎಂದ ಅವರು, ಕೌಶಲ್ಯ ಆಧಾರಿತ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬರುತ್ತದೆ ಎಂದು ಅವರು ಹೇಳಿದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಸಹಾಯಕ ಆಯುಕ್ತ ಟಿ.ವಿ. ಪ್ರಕಾಶ್ ಅವರು, ಟಿ.ವಿ. ಮೊಬೈಲ್‌ಗಳ ಪ್ರಭಾವದಿಂದ ವಿದ್ಯಾರ್ಥಿಗಳು ಕೇಳಿಸಿಕೊಳ್ಳುವ ವ್ಯವಧಾನ ಕಳೆದು ಕೊಂಡಿದ್ದಾರೆ. ಆದ್ದರಿಂದ ನೈತಿಕ ಶಿಕ್ಷಣವನ್ನು ಸರ್ಕಾರ ಅಳವಡಿಕೆ ಮಾಡುತ್ತಲಿದೆ ಎಂದು ಅವರು ಹೇಳಿದರು.

ಡಾ. ಎಸ್. ಎನ್. ಮಹೇಶ ಮಾತನಾಡಿದರು. ಪುರಸಭಾ ಅಧ್ಯಕ್ಷ ಎಚ್.ಎಂ.ಅಶೋಕ ಅಧ್ಯಕ್ಷತೆ ವಹಿಸಿದ್ದರು. ಪ್ರಭಾರಿ ಮುಖ್ಯ ಶಿಕ್ಷಕ ಎಚ್.ಸಲೀಂ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಶಿವಯೋಗಿ ಶಾಲಾಭಿವೃದ್ದಿ ಕುರಿತು ವರದಿ ಮಂಡಿಸಿದರು.

ಪುರಸಭಾ ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ ಸಣ್ಣ ಹಾಲಪ್ಪ, ಶತಮಾನೋತ್ಸವ ಸಮಿತಿ ಅಧ್ಯಕ್ಷ ಪಾರಸ್ಮಲ್ ಜೈನ್, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಜಯರಾಜ್, ಎಸ್ ಡಿಎಂಸಿ ಅಧ್ಯಕ್ಷೆ ರೇಖಾ, ಶತಮಾನೋತ್ಸವ ಸಮಿತಿ ಉಪಾಧ್ಯಕ್ಷ ಪಿ.ಬಿ.ಗೌಡ, ಸ್ವಾಗತ ಸಮಿತಿ ಅಧ್ಯಕ್ಷ ಸಿ.ಎಂ. ಕೊಟ್ರಯ್ಯ, ಪದಾಧಿಕಾರಿಗಳಾದ ಎ ಎಸ್ ಎಂ ಗುರುಪ್ರಸಾದ್, ಹುರುಳಿ ಕೊಟ್ರಪ್ಪ, ಸಂಕಪ್ಪನವರ ಕೊಟ್ರೇಶ್, ಎಚ್. ಎಂ.ಜಗದೀಶ, ಇಸಿಓ ಗಿರಜ್ಜಿ ಮಂಜುನಾಥ ಮತ್ತಿತರರಿದ್ದರು.

ನಗರದಲ್ಲಿ ನಾಳೆ ಜಿಲ್ಲಾ ಮಟ್ಟದ ಪರೀಕ್ಷಾ ಪೇ ಚರ್ಚಾ : ಚಿತ್ರಕಲಾ ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಜ.22- ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬರೆದ 'ಎಕ್ಸಾಮ್ ವಾರಿಯರ್ಸ್' ಎನ್ನುವ ಪುಸ್ತಕದಲ್ಲಿ ತಿಳಿಸಿರುವ 28 ಮಂತ್ರಗಳು ಕುರಿತಂತೆ ಜಿಲ್ಲಾಮಟ್ಟದ ಪರೀಕ್ಷಾಪೇ ಚರ್ಚಾ 2023ರ ಚಿತ್ರಕಲಾ ಸ್ಪರ್ಧೆಯನ್ನು 9 ಮತ್ತು 10ನೇ ತರಗತಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಕಾಲೇಜಿನಲ್ಲಿ (ಸ್ಕೂಲ್ ಆಫ್ ಆರ್ಟ್ಸ್) ನಾಡಿದ್ದು ದಿನಾಂಕ 24 ರ ಮಂಗಳವಾರ ಬೆಳಿಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದೆ.

ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ ಸಂಸ್ಥೆಯ ಸಿ.ಕೆ. ರಂಗಪ್ಪ ಹಾಗೂ ಡಾ॥ ರವಿಕುಮಾರ್ ಮತ್ತು ಸಹ ಸಂಚಾಲಕರಾದ ವಕೀಲ ಎ.ಸಿ. ರಾಘವೇಂದ್ರ ಅವರುಗಳ ಸಹಯೋಗದಲ್ಲಿ ಈ ಸ್ಪರ್ಧೆ ಏರ್ಪಾಡಾಗಿದೆ.

ಜಿಲ್ಲೆಯ ಶಾಲಾ/ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲು ಕರೆ ನೀಡಲಾಗಿದೆ. ವಿವರಕ್ಕೆ ಕಿರಣ್ (81054 29416, 98455 74143) ಅವರನ್ನು ಸಂಪರ್ಕಿಸಬಹುದು.

ಮಲೇಬೆನ್ನೂರಿನಲ್ಲಿ ಉರ್ದು ಕಲಿಕಾ ಹಬ್ಬ

ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಉರ್ದು ಶಾಲೆಗಳ ಕಲಿಕಾ ಹಬ್ಬವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯ ಶಿಕ್ಷಕ ಮಲ್ಲಿಕಾರ್ಜುನಪ್ಪ ತಿಳಿಸಿದ್ದಾರೆ.

ಷಹಾಜಿ ರಾಜೇ ಭೋಂಸ್ಲೆರವರ 359ನೇ ಪುಣ್ಯಾರಾಧನೆ ಇಂದು

ದಿ. ಶ್ರೀ ಷಹಾಜಿ ರಾಜೇ ಭೋಂಸ್ಲೆ ಅವರ 359ನೇ ಪುಣ್ಯಾರಾಧನೆ ಕಾರ್ಯಕ್ರಮ

ದಿನಾಂಕ 23.01.2023ನೇ ಸೋಮವಾರ

ಸಮಯ : ಬೆಳಿಗ್ಗೆ 10 ಗಂಟೆಗೆ

ಸ್ಥಳ : ಚನ್ನಗಿರಿ ತಾಲ್ಲೂಕು ಹೊದಿಗೆರೆಯ ಸ್ಮಾರಕ ಭವನ

ಕಾರ್ಯಕ್ರಮದಲ್ಲಿ ಭಕ್ತಾದಿಗಳಿಗೆ ಭಾಗವಹಿಸಲು ಅನುಕೂಲವಾಗುವಂತೆ ದಾವಣಗೆರೆಯಿಂದ ಹೊದಿಗೆರೆಗೆ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ. ಭಾಗವಹಿಸಲಿಚ್ಛಿಸುವವರು ದಿನಾಂಕ 23ರ ಸೋಮವಾರ ಮುಂಜಾನೆ 6.45 ರಿಂದ 7.45ಕ್ಕೆ ನಗರದ ಶ್ರೀ ವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್)ದಿಂದ ಬಸ್ ಹೊರಡಲಿದೆ.

ಕ್ಷತ್ರಿಯ ಮರಾಠ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಡಿ. ಮಾಲತೇಶರಾವ್ ಜಾಧವ್ ಅಧ್ಯಕ್ಷರು
ಯಶವಂತರಾವ್ ಜಾಧವ್ ಗೌರವಾಧ್ಯಕ್ಷರು

✦ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ (ರಿ).
✦ ಶ್ರೀ ಜೀಜಾಮಾತಾ ಮಹಿಳಾ ಮಂಡಳಿ, ದಾವಣಗೆರೆ.
✦ ಶ್ರೀ ಛತ್ರಪತಿ ಶಿವಾಜಿ ತರುಣ ಯುವಕರ ಸಂಘ (ರಿ), ದಾವಣಗೆರೆ.

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ಜನನ : 11.09.1961
ಮರಣ : 23.01.2019

ದಿ. ಡಾ॥ ವಸಂತಕುಮಾರ್ ಹೆಚ್.ಪಿ.

ಅರಿವಳಿಕೆ ತಜ್ಞರು,
ಇ.ಎಸ್.ಐ. ಆಸ್ಪತ್ರೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ 23.01.2023ಕ್ಕೆ ನಾಲ್ಕು ವರ್ಷಗಳಾದವು. ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಜೀವಂತವಾಗಿದೆ. ನಿಮ್ಮ ನಡೆ, ನುಡಿ ಹಾಗೂ ತ್ಯಾಗಮಯ ಜೀವನ ನಮ್ಮೆಲ್ಲರಿಗೂ ದಾರಿದೀಪ. ನಮ್ಮೆಲ್ಲರ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿರುವ ನಿಮಗೆ ಪರಮಾತ್ಮನು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ

ಪತ್ನಿ: ಪೂಜಾ ಹೆಚ್.ಪಿ. ಮತ್ತು
ಮಗ: ವಿರಾಜ್ ಹೆಚ್.ಪಿ.
ಹಾಗೂ ಬಂಧು-ಮಿತ್ರರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte